
ಕನ್ನಡ ಅನುಷ್ಠಾನ ವರ್ಷ - ೨೦೦೮

# ಕಾವ್ಯ ಸಿಂಚನ



ಮಡಿಕೇರಿ ಜನೋತ್ಸವ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೦೮

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

# ಕಾವ್ಯ ಸಿಂಚನ

(ಬಹುಭಾಷಾ ಕವನ ಸಂಕಲನ)

ಮಡಿಕೇರಿ ಜನೋತ್ಸವ

ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೦೯

# KAVYA SINCHANA

An anthology of poems published by Madikeri Dasara Bahubasha Kavigosti Samithi - 2009

# ಕಾವ್ಯ ಸಿಂಚನ

ಮಡಿಕೇರಿ ಜನೋತ್ಸವ ದಸರಾ ಸಂದರ್ಭ ಬಹುಭಾಷಾ ಕವಿಗೋಷ್ಠಿ ಸಮಿತಿ ವತಿಯಿಂದ ಪ್ರಕಟಿಸಲಾದ ಕವನ ಸಂಕಲನ

ಪುಟಗಳು :

ವಿನ್ಯಾಸ ಮತ್ತು ರೇಖಾ ಚಿತ್ರಗಳು : ದಿನೇಶ್ ಕುಕ್ಕುಜಡ್ಕ

ಮುದ್ರಕರು : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 228829, 229202

# ಸಿಂಚನಕ್ಕೆ ಮುನ್ನ....

ಆತ್ಮೀಯರೇ,

"ನಾಡ ಹಬ್ಬವಾಗಿ ಆಚರಿಸಲ್ಪಡುವ ದಸರಾ ಕೊಡಗಿನ ಜನತೆಯಲ್ಲಿ ಸಂಭ್ರಮಕ್ಕೊಂದು ಕಾರಣವಾಗುತ್ತಿದೆ. ನವರಾತ್ರಿಯೂ ಜನತೆ ಹಬ್ಬದ ಸಡಗರದಲ್ಲಿ ಉಲ್ಲಾಸಭರಿತರಾಗಿರುತ್ತಾರೆ.

ಕರ್ನಾಟಕದಲ್ಲಿ ಮೈಸೂರು ದಸರಾ ಹೊರತುಪಡಿಸಿದರೆ, ನಂತರದ ಸ್ಥಾನ ಮಡಿಕೇರಿಗೆ ಸಲ್ಲುತ್ತದೆ. 'ಮಡಿಕೇರಿಯ ರಾತ್ರಿ ದಸರಾ' ರಾಜ್ಯದಲ್ಲಿಯೇ ಒಂದು ವಿನೂತನ ಆಚರಣೆ. ಕತ್ತಲಲ್ಲಿ ಬೆಳಗುವ ವಿದ್ಯುದ್ದೀಪಾಲಂಕಾರದ ಮಂಟಪಗಳಿಂದ ರಾತ್ರಿಯೂ ಹಗಲಾದ ವಾತಾವರಣದಲ್ಲಿ ಮಡಿಕೇರಿ ದಸರಾ ಕಳೆಗಟ್ಟುತ್ತದೆ. ಕೊಡಗಿನ ವಿಶಿಷ್ಟ ಸಂಸ್ಕೃತಿ, ಆಚರಣೆಗಳಿಗೆ ಇಲ್ಲಿನ ದಸರಾ ಉತ್ಸವವೂ ಹೆಮ್ಮೆಯ ಪ್ರತೀಕವೆನಿಸಿದೆ. ಜನರ ಸಮಿತಿಯೇ ದಸರಾ ನಡೆಸುವುದರಿಂದ ಇದು ನಿಜವಾದ ಅರ್ಥದಲ್ಲಿಯೂ 'ಜನೋತ್ಸವ'

ದಸರಾ ಸಂಭ್ರಮದ ಪ್ರಯುಕ್ತ ಅನೇಕ ವರುಷಗಳಿಂದ ಮಡಿಕೇರಿಯಲ್ಲಿ 'ದಸರಾ ಬಹುಭಾಷಾ ಕವಿಗೋಷ್ಠಿ' ನಡೆಸುತ್ತಾ ಬರಲಾಗುತ್ತಿದೆ. ಕೊಡಗು ಜಿಲ್ಲಾ ಮಟ್ಟಕ್ಕೆ ಸೀಮಿತವಾದ ಈ ಕವಿಗೋಷ್ಠಿಯಲ್ಲಿ ಕೊಡಗಿನ ಪ್ರತಿಭಾವಂತ, ಉದಯೋನ್ಮುಖ ಕವಿಗಳು ಕಾವ್ಯ ವಾಚನ ಮಾಡುತ್ತಾ ಬಂದಿದ್ದಾರೆ. ಕನ್ನಡ, ಕೊಡವ, ಅರೆಭಾಷೆ, ತುಳು, ತೆಲುಗು, ಮಲಯಾಳಿ, ಇಂಗ್ಲೀಷ್ ಕವನಗಳು ಗೋಷ್ಠಿಯಲ್ಲಿ ವಾಚಿಸಲ್ಪಡುತ್ತವೆ. ಈ ಬಾರಿ ಹವ್ಯಕ ಮತ್ತು ಕುಂಬಾರ ಭಾಷೆಯ ಕವನಗಳೂ ದಸರಾ ಕವಿಗೋಷ್ಠಿಗೆ ಹೊಸದಾಗಿ ಸೇರ್ಪಡೆಯಾಗಿರುವುದು ವಿಶೇಷ.

ದಸರಾ ಕವಿಗೋಷ್ಠಿಗೆ ಈ ವರುಷವೂ ನೂರಾರು ಕವನಗಳು ಬಂದಿದ್ದರೂ ಅವುಗಳಲ್ಲಿ ಆಯ್ಕೆ ಮಾಡಬೇಕಾದ ಅನಿವಾರ್ಯತೆಯನ್ನು 'ಆಯ್ಕೆ ಸಮಿತಿ'ಗೆ ಬಿಡಲಾಯಿತು. ಸಮಿತಿ ಆಯ್ಕೆ ಮಾಡಿದ ಕವನಗಳು ಕವಿಗೋಷ್ಠಿಯಲ್ಲಿ ವಾಚಿಸಲು ಅವಕಾಶ ಪಡೆದು, ಈ 'ಕಾವ್ಯ ಸಿಂಚನ'ದಲ್ಲಿ ಪ್ರಕಟವಾಗಿದೆ.

'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೊ...' ಎಂಬ ಪ್ರಾಕೃತಿಕ ಐಸಿರಿಯ ಬೆಡಗಿನ ಕೊಡಗು ಹಲವು ವರ್ಷಗಳಿಂದ ನಾಡಹಬ್ಬವನ್ನು ಆಚರಿಸಿಕೊಂಡು ಬಂದಿದೆ. ಈ ಸಂಭ್ರಮಾಚಾರಣೆಯನ್ನು ಮತ್ತೆ ಮೆಲುಕು ಹಾಕಲು ಕೊಡಗಿನ ವಿವಿಧ ಭಾಷಿಕರ, ಸೃಜನಶೀಲ ಮನಸ್ಸುಗಳ ಭಾವನೆಗಳನ್ನು ದಾಖಲಿಸುವ ಕೆಲಸವನ್ನು ಈ ಸಂಕಲನದ ಮೂಲಕ ಮಾಡಲಾಗಿದೆ. ಸುಂದರ ಹೂತೋಟದೊಳಗಿರುವ ಹಲವು ಬಣ್ಣಗಳ ಹೂವುಗಳಂತೆ ಹಲವು ಭಾಷೆಗಳ ಹಂದರದಲ್ಲಿ ಹೆಣೆಯಲಾದ, ಕೊಡಗಿನ ನೆಲ, ಜಲ, ಜನ, ಸಂಸ್ಕೃತಿ, ಚರಿತ್ರೆ, ಸುಖ ದುಃಖಗಳ ಕುರಿತಾಗಿ ಮಿಡಿದ ಕವನಗಳು ಇಲ್ಲಿವೆ. ವಿಭಿನ್ನ ಭಾಷೆಗಳಲ್ಲಿ, ಸರಳ ರೂಪಕಗಳಾಗಿ ಇವು ತೆರೆದುಕೊಂಡಿವೆ.

ಬಹುಭಾಷೆಗಳಿಂದ ಆಯ್ದು ಕೊಡಗಿನ ಪ್ರತಿಭಾವಂತರಿಂದ ಮೂಡಿ ಬಂದ ಕನವಗಳ ಸಿಂಚನವೇ ಈ 'ಕಾವ್ಯ ಸಿಂಚನ'ವಾಗಿ ನಿಮ್ಮ ಮುಂದಿದೆ.

ಮನೋಭೂಮಿಕೆಯ ಹಲವು ಅನಿಸಿಕೆಗಳು, ಭಾವನೆಗಳು, ಅನುಭವಗಳನ್ನು ಹೇಳಿಕೊಳ್ಳುವ

ಸಾಹಿತ್ಯದ ಪ್ರಕಾರಗಳಲ್ಲಿ ಕವಿತೆ ಒಂದು ಸೂಕ್ಷ್ಮ ಹಾಗೂ ಸಂಕೀರ್ಣ ಮಾಧ್ಯಮ. ಇಲ್ಲಿನ ಕವಿಗಳಲ್ಲಿ ಅವನ್ನು ಕಾಣಬಹುದು. ಪ್ರಾಸಬದ್ಧ ಭಾವಗೀತೆ, ನವ್ಯಗೀತೆ, ಬಂಡಾಯ, ವ್ಯವಸ್ಥೆಯೆಡೆಗಿನ ಜಿಗುಪ್ಸೆ, ಒಳ್ಳೆಯದಾದೀತೆಂದು ನಿರೀಕ್ಷೆ.. ಹೀಗೆ.

ಇಲ್ಲಿ ಯಾರೂ ವೃತ್ತಿಪರ ಕವಿಗಳಲ್ಲ ಸಂತೋಷಕ್ಕೆ, ಇಂತಹ ಸಂದರ್ಭಗಳಲ್ಲಿ ತಾವೂ ಒಂದು ಪ್ರಯತ್ನ ನಡೆಸಿರುವುದು ಆಯ್ಕೆ ಸಮಿತಿಯ ಆಯ್ಕೆ ಸಂದರ್ಭ ಕಂಡುಕೊಂಡಿದೆ. ಆದರೆ, ಹಲವರು ತಮ್ಮ ಪ್ರಯತ್ನದಲ್ಲಿ ಬಹುತೇಕ ಯಶಸ್ವಿಯಾಗಿದ್ದು, ತಮ್ಮ ಮುಂದಿನ ಪ್ರಯತ್ನಗಳಿಗೆ ಮತ್ತೊಂದು ಅವಕಾಶ ಪಡೆದಿದ್ದಾರೆ. ಆಯ್ಕೆಯಾದವು ಶ್ರೇಷ್ಠ, ಆಯ್ಕೆಯಾಗದಿರುವುದು ಕನಿಷ್ಠ ಎಂಬ ಪ್ರಶ್ನೆಯಿಲ್ಲ. ಆಯ್ಕೆಯ ಇತಿಮಿತಿಯಲ್ಲಿ ಇವನ್ನು ಗಮನಿಸಲೇಬೇಕು.

'ಕಾವ್ಯ ಸಿಂಚನ' ಮೂಡಿ ಬರಲು ಕಾರಣಕರ್ತರಾದ ದಸರಾ ಸಮಿತಿ ಅಧ್ಯಕ್ಷ ಶ್ರೀ ಪಿ.ಡಿ. ಪೊನ್ನಪ್ಪ, ಕಾರ್ಯಾಧ್ಯಕ್ಷ ಶ್ರೀ ಎಸ್.ಸಿ. ಸುಬ್ರಮಣಿ, ಗೌರವಾಧ್ಯಕ್ಷ ಶ್ರೀ ಜಿ. ಚಿದ್ವಿಲಾಸ್, ದಸರಾ ಸಮಿತಿ ಪದಾಧಿಕಾರಿಗಳಿಗೆ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಐಮುಡಿಯಂಡ ರಾಣಿ ಮಾಚಯ್ಯ, ಅಕಾಡೆಮಿ ಸದಸ್ಯರುಗಳಿಗೆ, ರಿಜಿಸ್ಟ್ರಾರ್‌ರಿಗೆ ಕವಿಗೋಷ್ಠಿ ಸಮಿತಿ ಪರವಾಗಿ ಕೃತಜ್ಞತೆಗಳು.

ಕವಿಗೋಷ್ಠಿ ಉದ್ಘಾಟಿಸಲು ಆಗಮಿಸಿದ ಹೆಸರಾಂತ ಲೇಖಕ ಶ್ರೀ ಮೊಗಳ್ಳಿ ಗಣೇಶ್, ಕೊಡಗು ಜಿಲ್ಲಾಧಿಕಾರಿ ಶ್ರೀ ಅಶ್ವಥನಾರಾಯಣ ಗೌಡ, ಮಡಿಕೇರಿ ಆಕಾಶವಾಣಿ ನಿಲಯದ ಕಾರ್ಯಕ್ರಮ ನಿರ್ವಾಹಕ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಥೆಗಾರ ಶ್ರೀ ಅಬ್ದುಲ್ ರಶೀದ್, ಆಹ್ವಾನಿತ ಕವಿಗಳಾಗಿ ಆಗಮಿಸಿರುವ ಶ್ರೀ ಜಿ.ಕೆ. ರವೀಂದ್ರಕುಮಾರ್, ಶ್ರೀ ನಾಗೇಶ್ ಕಾಲೂರು, ಶ್ರೀಮತಿ ತೀತೀರ ರೇಖಾ ವಸಂತ್ ಅವರುಗಳಿಗೂ ಸಮಿತಿ ಅಭಾರಿ.

ಈ ಕಾವ್ಯ ಸಂಕಲನಕ್ಕೆ 'ಕಾವ್ಯ ಸಿಂಚನ' ಹೆಸರು ನೀಡಿದ 'ಪ್ರಜಾವಾಣಿ'ಯ ಮಿತ್ರ ಶ್ರೀ ಸದೇಶ್ ದೊಡ್ಡಪಾಳ್ಯ, ಮುಖಪುಟ ವಿನ್ಯಾಸವನ್ನು ಚಂದಗಾಣಿಸಿದ ಕಲಾವಿದ ಮಿತ್ರ ಶ್ರೀ ದಿನೇಶ್ ಕುಕ್ಕುಜಡ್ಕ, ಅಕ್ಷರ ವಿನ್ಯಾಸ ಮಾಡಿದ 'ಶಕ್ತಿ' ಮುದ್ರಣಾಲಯ, ಕವಿಗೋಷ್ಠಿ ಸಮಿತಿಯ ಸಂಚಾಲಕ ಎಸ್.ಜಿ. ಉಮೇಶ್, ಗೆಳೆಯರಾದ ಬಿ.ಸಿ. ದಿನೇಶ್, ಸದೇಶ್ ಕಾರ್ಮಾಡ್, ಅಜ್ಜಮಾಡ ರಮೇಶ್ ಕುಟ್ಟಪ್ಪ, ಕಾಯಪಂಡ ಶಶಿ ಸೋಮಯ್ಯ, ಅನುಕಾರ್ಯಪ್ಪ, ಜಗದೀಶ್ ಬೆಳ್ಯಪ್ಪ, ಶಿವರಾಂ, ಕುಡೆಕಲ್ ಸಂತೋಷ್, ಟಿ.ಕೆ. ಸಂತೋಷ್, ಹೆಚ್.ಎಸ್. ಮಂಜುನಾಥ್, ಎಸ್.ಕೆ. ಲಕ್ಷ್ಮೀಶ್, ಕವನಗಳನ್ನು ಆಯ್ಕೆ ಮಾಡಿದ ಶ್ರೀಮತಿ ಶಾರದಾ ನಂಜಪ್ಪ, ಸುಬ್ರಾಯ ಸಂಪಾಜೆ, ಪ್ರಿಯ ರವಿಕುಮಾರ್, ಎಂ. ವಿದ್ಯಾಧರ ರೈ ಇವರುಗಳ ಸಹಕಾರಕ್ಕೆ ಸಮಿತಿ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕವಿಗೋಷ್ಠಿಯಲ್ಲಿ ಪಾಲ್ಗೊಂಡು 'ಕಾವ್ಯ ಸಿಂಚನ'ದಲ್ಲಿ ಅವಕಾಶ ಪಡೆದ ಕವಿಗಳಿಗೆ ಅಭಿನಂದನೆಗಳು.

**ಅನಿಲ್ ಹೆಚ್.ಟಿ.**

*ಅಧ್ಯಕ್ಷರು ಕವಿಗೋಷ್ಠಿ ಸಮಿತಿ*

*ಮಡಿಕೇರಿ ಜನೋತ್ಸವ ದಸರಾ ಸಮಿತಿ- ೨೦೦೮*

# ಪರಿವಿಡಿ

## ಆಹ್ವಾನಿತ ಕವನ


| | | |
|---|---|---|
| 1 | ಕತ್ತಲೆಯ ನಗು | 1 |
| 2 | ಅಮ್ಮಾ ನೀಡ ಗೇನತ್ | 2 |
| 3 | ಕನಸು | 3 |


## ಕನ್ನಡ ಕವನ


| | | |
|---|---|---|
| 4 | ಮೌನಿಯಾಗು ಮನವೆ | 4 |
| 5 | ರಾಧ - ಕೃಷ್ಣರ ಪ್ರೇಮ | 5 |
| 6 | ಬದುಕು ಜಟಕಾ ಬಂಡಿ | 6 |
| 7 | ಹೊಂಗಿರಣ | 7 |
| 8 | ಆ ಸಂಜೆಯಲಿ.. | 8 |
| 9 | ನಮ್ಮ ಸೈನಿಕರು | 9-10 |
| 10 | ಕನಸುಗಳು ಮಾರಾಟಕ್ಕಿವೆ ! | 11 |
| 11 | ದುಃಖವಿಲ್ಲದ ಹಾಡುಗಳು | 12 |
| 12 | ಕಂದನ ಪ್ರಶ್ನೆ ? | 13 |
| 13 | ಹುಡುಕಾಟ | 14-15 |
| 14 | ಕ್ರಾಂತಿಯಾಗಬೇಕು ! | 16 |
| 15 | ಸಿ.ಎಂ. ಸಾಹೇಬ್ರಿಗೊಂದು ಮನವಿ | 17-18 |
| 16 | ಮೌನದ ನಿಟ್ಟುಸಿರು ! | 19 |
| 17 | ನಾನು ನಾನಾಗಲಿಲ್ಲ | 20 |
| 18 | ಎಲ್ಲಿಗೀ ಪಯಣ | 21 |


## ಕೊಡವ ಕವನ


| | | |
|---|---|---|
| 19 | ಪಟ್ಟಾಳಕಾರ ಪೊನ್ನು ಪಾಡ್‌ಚಿನ್ನನೆ | 22-23 |
| 20 | ನಂಗಡ ಮಣ್ಣ್ - ನಂಗಡ ನಾಡ್ | 24-25 |
| 21 | ಎಲಂಗುವಾ... ನಾಡ್ | 26-27 |
| 22 | ಪಣತ್‌ರ ಬೀರ್ಯ | 28 |
| 23 | ಚಾಯಿ ಮೂಡಿ | 29 |
| 24 | ಮಂಗಲಕ್ ಪೋಕನ | 30-31 |

# ಪರಿವಿಡಿ

## ಅರೆಭಾಷೆ ಕವನ


| | | |
|---|---|---|
| 25 | ಪ್ರಯಾಣ | 32-33 |
| 26 | ಕಾಲ ಮಹಿಮೆ | 34 |
| 27 | ಭ್ರಮೆ | 35 |


## ತುಳುಭಾಷೆ ಕವನ


| | | |
|---|---|---|
| 28 | ಕಾವೇರಿಗ್ ಸೊಲ್ಮೆ | 36-37 |
| 26 | ಕೊಡಗ್ | 38 |
| 27 | ಏತೊಂಜಿ ಪೊರ್ಲುಡ್ತಾ ಊರು | 39 |


## ವಿದ್ಯಾರ್ಥಿ ಕವನ


| | | |
|---|---|---|
| 28 | ಕೊಡಗು | 40 |
| 29 | ಬಾನಿನ ಬೆಳಕು | 41 |


## ಹವ್ಯಕ ಭಾಷೆ ಕವನ


| | | |
|---|---|---|
| 30 | ಎಂಗಳದಲ್ಲವೇ? | 42 |


## ಕುಂಬಾರ ಭಾಷೆ ಕವನ


| | | |
|---|---|---|
| 32 | ನಮ್ಮ ಭಾಷೆ ಕುಂಬಾರ ಭಾಷೆ | 43 |


## ತಮಿಳು ಕವನ


| | | |
|---|---|---|
| 33 | ಮಲ್ಶೈಯೋರಮ್ | 44 |


## ತೆಲುಗು ಕವನ


| | | |
|---|---|---|
| 34 | ಷಷ್ಠಿಪೂರ್ತಿ ದಾಟಿನಮನ ಸ್ವಾತಂತ್ರ್ಯಂ | 45-46 |


## ಚುಟುಕಗಳು


| | | |
|---|---|---|
| 35 | ಕವನ, ರಕ್ಷೆ, ಬದುಕುವ ಕಲೆ, ವಿಪರ್ಯಾಸ | 47 |


## English Poems


| | | |
|---|---|---|
| 35 | Fathomless | 48 |
| 36 | My Mother | 49 |
| 37 | ಕವಿಗೋಷ್ಠಿಯಲ್ಲಿ | 50-52 |
| 38 | ಕವಿಗೋಷ್ಠಿ ಸಮಿತಿ | 53 |

**ಆಹ್ವಾನಿತ ಕವನ**

# ಕತ್ತಲೆಯ ನಗು

ಬೆಳಕೆಂಬ ಭಾವಕ್ಕಾಗಿ ಜನರು ಕಾಯುವುದ ಕಂಡು
ನಗುತ್ತದೆ ಕತ್ತಲು
ಆದರ ನಗು ಕಾಣುವುದಿಲ್ಲ
ಆದರ ನಗುವೇ ಬೆಳಕೆಂದು ಯಾರೂ ನಂಬುತ್ತಿಲ್ಲ

ಆಡಿಗೊಂಡಿವೆ ಬೆಳಕ ಮಣಿಗಳು ಆದರ ಮಕ್ಕಳು
ಓಡಿಕೊಂಡು ಆಡಿಕೊಂಡು ಮುಟ್ಟಾಟ ಜೂಟಾಟ
ಎಷ್ಟು ದೂರವೋ ಅಷ್ಟೂ ಮಡಿಲು ಮಹಾದಾಯಿ ಒಡಲು

ಆ ತಾಯಿಗೆ ಬ್ರಹ್ಮಾಂಡದ ಮಡಿಲು
ಒಂದರೊಳಗೊಂದು ಬೆರೆತು ರೂಪದಂತೆ ರಸದಂತೆ
ಸತ್ಯದಂತೆ ತತ್ವದಂತೆ

ನಮ್ಮದೇ ದೇಹದಂತೆ
ಅಣಕಗೊಳ್ಳುವ ಮಾಯೆ

ನೋಡುವಾಗ ನಗುವಾಗ ಮಾತು ಮೌನದಿ ಅರಳುವಾಗ
ನಮ್ಮೊಳಗಿನ ಕತ್ತಲೆಯ ಮಾತನಾಡಿಸಿ ಉಂಟೇ?

ಬೆಳಕ ಕೊಡು ತಾಯೆ
ನಿನ್ನ ಕಾಣಬೇಕಿದೆ
ಬೆಳಕ ನೀಡಿದ ಮೇಲೆ ಎಲ್ಲಿರುವೆ ತಾಯೆ
ನಮ್ಮ ಕಾಣಬೇಕಿದೆ.

**- ಜಿ.ಕೆ. ರವೀಂದ್ರಕುಮಾರ್**

# ಅಮ್ಮಾ ನೀಡ ಗೇನತ್...

ಮಂಜಿ ಕವುಂಜ ಕುಂದ್ ಸಾಲ್
ತ್ೕಂಡಿತೊಮ್ಮ ಆಂಡ ಮೇಲ್
ನಾನ್ ಅದ್‌ನ ಕಂಡ ನೇರ ಅಮ್ಮಾ ನೀಡ ಗೇನ

ಮರತ್‌ರಡಿಲ್ ತಣ್ವು ನಳತ್
ಚಾಯಿ ಕಾತ್‌ರೆದಿಕೆ ಅಳ್‌ತ್
ಓಡತಿರಡ್ ಕಾಲ ನೇರ ಅಮ್ಮಾ ನೀಡ ಗೇನ

ಬಾನತ್ಂಜ ಇಳ್ಂಜ ಮಳೆಲ್
ನೂರ್ ತುಳಿರ ಪ್ರೀತಿರೊಳ್‌ಲ್
ಭೂಮಿ ನೆಲಂದಿತಳ್‌ತ ಗಳಿಗೆ ನಾಕ್ ನೀಡ ಗೇನ

ನೀಡ ಎದೆರ ಪಾಲ್ ಕುಡ್‌ಚಿ
ಕಯಿಂಜ ಬಾಲ್ಯ ಏದ್ ಚಾಯಿ
ನಾನ್ ಅರ್ಂಜಿಲೆಂದ್ ಅದ್‌ನ ಇಂದ್ ಆಂಡ ಗೇನ

ನೀಡ ಕೈರ ಚುತ್ತೆ ಕೂಳ್
ಏದದಿಕ್ಕು ತೀನಿ ಚೋದ್
ಮರ್‌ಪಕಯ್ಯ ಮನತ್‌ಲುಂಡ್ ಇಂದ್ ಆಂಡ ಗೇನ

ತಡಿಯು ನೀಡ ಇಲ್ಲತಿಕ್ಕು
ಹೃದಯತ್ರೊಳ್‌ಲ್ ಕಂಡಂಡಿಕ್ಕು
ನೀಡ ಮಡ್‌ಲೇ ಜನ್ಮ ನೂರ್ ಕೂಟ್‌ಕಿರಡ್ ಗೇನ

ಅಮ್ಮಾ ನೀಡ ಆತ್ಮ ಇಂದ್
ನಾಡ ಜೀವ ಭಾವತುಂಡ್
ಮಾಜತಂತ ಕವನ ತುಳಿಲೂ ಎಂದೂ ನೀಡ ಗೇನ !

- ನಾಗೇಶ್ ಕಾಲೂರು

# ಕನಸು

ಕತ್ತಲಾಗದ ರಾತ್ರಿ, ಬತ್ತಿ ಹೋಗದ ಹಗಲು
ಬದುಕ ಕಟ್ಟುವುದ ಬಿಟ್ಟು ಕಂಗೆಡಿಸುತಿಹವು
ಕನಸು ಕಾಣುವ ಮೊದಲೇ ಕನವರಿಸುತಿಹೆವಿಂದು
ಗರ್ಭಕಟ್ಟುವ ಮೊದಲೇ ಗರ್ಭಪಾತ!

ಕಂಬನಿಯ ಮರೆತಿರುವ ಕಣ್ಣುಗಳಲಿ
ಭಾವನೆಗಳಿಲ್ಲದಿಹ ಬರಿಯಂಗಳದಲಿ
ಸರ್ವಕ್ಕು ಸಮಯ ಸರಿದೂಗಿಸುವ ಸರ್ಕಸ್ಸಿನಲಿ
ಸಾಗುತಿರುವೆವು ನಾವು ವರ್ತಮಾನದಲಿ

ಕನಸ ಕಾಣದಿಹ ಮನಸಿನೊಳಗೇನುಂಟು
ಕನಸ ಕಾಣುವುದೇ ನನಸಿಗಾಮಂತ್ರಣವು
"ಬೆಳಕಿಲ್ಲದ ದಾರಿಯಲಿ ಸಾಗಬಲ್ಲೆವು ನಾವು
ಕನಸುಗಳಿಲ್ಲದ ದಾರಿಯಲಿ ಸಾಗಲಾಗದು"!
ಕಂದಮ್ಮಗಳ ಕಣ್ಣಕೋಡಿಕೋಡಿಗಳಲಿ
ಕನಸಕಟ್ಟುವ ಹೊತ್ತು ಕಾದುಕುಳಿತಿಹುದಿಂದು
ನಾಡುನುಡಿ ಸಂಸ್ಕೃತಿಯ ಕನಸಬಿತ್ತುತ ಬೆಳೆವ
ಕಸುವು ಕಟ್ಟಿಸುವ ಕೆಲಸ ಮಾಡಬೇಕಿದೆ
ಹೀಗೆ
ಜಾಗತೀಕರಣಕುತ್ತರವ ನೀಡಬೇಕಿದೆ

- ತೀತೀರ ರೇಖಾ ವಸಂತ

ಕನ್ನಡ ಕವನ

# ಮೌನಿಯಾಗು ಮನವೆ

ಹಿತ-ಮಿತದ ಇಂಪಾದ ನುಡಿಯಾಗಿಸು ಮನವೆ
ಮೌನದ ಸುಧೆಯಾಗಿ ಹರಿದು ಬಾ ಎಂದೆಂದೂ....
ಬಾಳ ತಳ್ಳುವುದದು ಬಲು ಸುಲಭ ಮೌನದಲಿ
ಹೊನ್ನ ದೀವಿಗೆಯಂತೆ ಮೌನವಾಗಿ ಬೆಳಗಲಿ!

ಬೆದರಿಕೆಯ ಸ್ಫೋಟಗಳಿಗಂಜದ ಭೂದೇವಿ
ತನ್ನ ಪಾಡಿಗೆ ತಾ ಸುತ್ತುತ್ತಿದೆ ಮೌನವಾಗಿ;
ದಂಡೆತ್ತಿ ಧಾವಿಸುವ ಸಮಸ್ಯೆಗಳಿಗೆಲ್ಲಾ...
ತುಂಬಿದ ಕೊಡದಂತೆ ನೀ ಮೌನಿಯಾಗಿ

ಹಗೆ-ಹೊಗೆಯಲು ನೀ ತಟಸ್ಥವಾಗು
ದ್ವೇಷಾಗ್ನಿಯನು ಮೌನದಲಿ ನಂದಿಸು
ಮುಂಜಾನೆ ಬೆಳಕಿನಂತೆ ಮುಸ್ಸಂಜೆ ಓಕುಳಿಯಂತೆ;
ತಿಳಿಯಾಗು ನೀ ನೀರವತೆಯಂತೆ!

ಬಿರುಗಾಳಿಯಬ್ಬರಕೆ ಮುರಿವ ಪಾದಪಗಳಂತೆ
ಚುಚ್ಚು ನುಡಿ ದಾಟಿಗೆ ಕಾಳನರ್ತನವಾಡದಿರಲಿ ನಾಲಗೆ;
.ಭೂಷಣವನು ಮನಕೆ ಮೌನದ ಪಾತ್ರ
ನೋವಿನ ಚಿತ್ತಾರ ಅಡಗಿರಲಿ, ಚಿತ್ತವನು ಜಾತ್ರೆ!

ಶಾಂತ ರಥವನೇರಿ ಬಾ ಮೇಲಕೆ
ಕಳ್ಳ ಹೆಜ್ಜೆಯಿಡಬಿಡಬೇಡ ಮಾತು ಬಲು ಜೋಕೆ!
ವಿಧಿಯಾಟದಲಿ ಮೇಳೈಸು ಸ್ತಬ್ಧವಾಗಿ
ನಿಧಿಯಾಗಿ ಬಾ ಮನಸ್ಸೆ ಮೌನವಾಗಿ....

- ಸುನಿತಾ ಲೋಕೇಶ್ ಸಾಗರ್, ಕುಶಾಲನಗರ

# ರಾಧೆ - ಕೃಷ್ಣರ ಪ್ರೇಮ

ಮಲ್ಲಿಗೆಯ ಘಮದಂತೆ ಮನಸು ಬೆರೆಯಲು ನಲ್ಲೆ
ಒಲವ ತೇರಿಗೆ ಹೂವು ಮಾಲೆಯಲ್ಲೆ

ಮಣ್ಣು ಮಳೆಗಳ ಮಿಲನ ಘಮಘಮಿಸಿ ನಗುವಂತೆ
ಜೀವ ಜೀವದ ಪ್ರೇಮ ಮಾಗಿ ಬೆರೆವಂತೆ
ಅರುಣ ಕಿರಣವ ಬೆರೆತು ಹೂವು ಅರಳುವುದಂತೆ
ಮಧುರ ಭಾವದ ಮನಕೆ ನಿತ್ಯಾರ್ಚನೆಯಂತೆ

ಬಾಳ ಗಂಗೆಯ ತಟದಿ ಹೃದಯ ದೇಗುಲದಲ್ಲಿ
ಅಂತರಾಳದ ಪ್ರೀತಿ ವಿಮಲ ಪೀಠದಲಿ
ನಲಿವು ಚೆಲುವಿನ ಮೂರ್ತಿ ಕುಳಿತಿರುವುದಲ್ಲಿ
ರಾಧೆ-ಕೃಷ್ಣರ ತೆರದಿ ನಗುವ ಚೆಲ್ಲಿ

ಎಲ್ಲ ಭೇದವ ಮರೆತು ಒಂದಾಗಿ ನೆಲೆಯಾಗಿ
ನಮ್ಮ ನಿರ್ಮಲ ಪ್ರೇಮ ರಸಶಿಲ್ಪವಾಗಿ
ಭಾವದಾಲಿಂಗನವೆ ನಿತ್ಯಮಲ್ಲಿಗೆಯಾಗಿ
ಸಿಹಿ ನೆನಪುಗಳ ತರಲಿ ಅಮರವಾಗಿ

ಎಲೆಲೆ ಜೀವದ ಗೆಳತಿ ಈ ಹಾಡು ನಿನಗಾಗಿ
ನಿನ್ನ ಪ್ರೇಮದ ಪರಿಯ ಸಿಹಿ ಜೇನಿಗಾಗಿ
ಈ ಪ್ರೀತಿಯಾ ಒರತೆ ನಾದಲೀಲೆಯೆ ಆಗಿ
ಇಂಚರವ ಮೂಡಿಸಲಿ ಮಧುರವಾಗಿ

- ಎಸಳೂರು ಉದಯಕುಮಾರ್, *ದೇಚೂರು, ಮಡಿಕೇರಿ*

# ಬದುಕು ಜಟಕಾ ಬಂಡಿ

ಸಂತೆಯೊಳಗಿನ ಸರಕು ನಮ್ಮೂರ ಮಂದಿಯ ಬದುಕು
ಹುರಿ ಮೀಸೆಯ ಗೌಡ
ಹರುಕು ಗಡ್ಡದ ಸಾಬಿ
ಮುರುಕು ಬೀಡಿಯ ಕೆಂಚ,
ಜುಟ್ಟಿಲ್ಲದೆ ಜುಟ್ಟು ಎಂದು
ಭ್ರಮಿಸುವ ಪೂಜಾರಿ.

ಬೀಡಿ ಕಟ್ಟುವ ಫಾತೀಮ
ಬೋಂಡ ಬೇಯಿಸಿದ ಬೋರಮ್ಮ
ಗೌಡನ ಮೀಸೆ ಕುಣಿದಂತೆ
ಗಡ್ಡಕೆ ಮಸಾಜು ಮಾಡಿದ ಸಾಬಿ
ನಜ್ಜುಗುಜ್ಜಾದ ಪುಟ್ಟನ ತುತ್ತೂರಿ
ಸರಕು ಕೊಂಡ ಸರದಾರರಿವರು.

ಸಂತೆಯಲಿ ಎಲ್ಲದಕೂ ಏರಿಳಿತ
ಸಾವಿನ ತುತ್ತೂರಿ
ಸಂಜೆಗೆಂಪು
ಸಂತೆಯೊಳಗೆ ಜಂತಿ ಹಿರಿದು
ಕಂತೆ ಕಟ್ಟಿದ ಮಂದಿ

ಗೌಡ, ಪೂಜಾರಿ, ಸಾಬಿ ಮಾಡಿದ ಸಂತೆ
ಭವ್ಯ ಸ್ಮಾರಕಗಳಿಗೆ ಜೀವ
ಭೂತದ ಗೋಡೆ, ವರ್ತಮಾನದ ಓಟ
ಭವಿಷ್ಯದ ಕಂದಮ್ಮಗಳಿಗೆ ಬೆದರುಗೊಂಬೆ
ಸಂತೆಯೊಳಗಿನ ಸರಕು ನಮ್ಮೂರ ಮಂದಿಯ ಬದುಕು.

- ಮೂರ್ತಿ ಹೆಚ್.ಬಿ.

# ಹೊಂಗಿರಣ

ಅಗೋ ಅಲ್ಲಿ ನೋಡು, ಉದಯಿಸಿತು ಸೂರ್ಯನ ಹೊಂಗಿರಣ
ಇಲ್ಲಿ ಮಾನವಕುಲ ಮಾಡುತ್ತಿರುವುದು ದೇಶದಲ್ಲಿ ಹರಣ
ದಿನನಿತ್ಯವು ಸಾವು ಬದುಕಿನ ನಡುವೆ ಜೀವನದ ಪಯಣ
ಧರ್ಮ, ಜಾತಿಯೆಂದು ಹೋರಾಡಿ ಹೋಗುತಿದೆ ಪ್ರಜೆಗಳ ಪ್ರಾಣ.

ನಾವೆಲ್ಲಾ ಸೇರ ಬನ್ನಿ, ಸಹಬಾಳ್ವೆ ಜೀವನ ಸಾಗಿಸೋಣ
ನಾವೆಲ್ಲಾ ಒಗ್ಗೂಡುತಾ ಶಿವ, ಅಲ್ಲಾ, ಏಸು, ಒಂದೇ ಎನ್ನೋಣ
ನಾವೆಲ್ಲಾ ಒಗ್ಗೂಡಿ ದೇಶದ ಭಕ್ಷಕರನ್ನು ಹೊರಗೋಡಿಸೋಣ
ನಾವೆಲ್ಲಾ ಸೇರುತಾ ದೇಶದ ಮಹಾತ್ಮರನು ಆರಾಧಿಸೋಣ.

ಒಬ್ಬರಿಗೊಬ್ಬರು ಸಹಕರಿಸುತ ದೇಶದ ಬಡತನ ನಿವಾರಿಸೋಣ
ನಮ್ಮಲಿ, ಮೇಲು ಕೀಳು ಯಾರೂ ಇಲ್ಲ ಒಂದೇ ಭಾವದಿ ಸೇರೋಣ
ನಾವೆಲ್ಲಾ ಸೇರುತ ವಿಶ್ವದಿ ತ್ರಿವರ್ಣ ಭಾರತ ಬಾವುಟ ಹಾರಿಸೋಣ
ತಾವೆಲ್ಲಾ ಒಗ್ಗೂಡಿ ಬನ್ನಿ ಒಮ್ಮೆಲೆ ಜನ, ಗಣ, ಮನ ಗೀತೆ ಹಾಡೋಣ.

ರಾಷ್ಟ್ರದ ಏಕತೆ ಏಳ್ಗೆಗಾಗಿ ನಾವು ಕೈ ಜೋಡಿಸಿ ಮುನ್ನಡೆಯೋಣ
ರಾಷ್ಟ್ರದ ಜನತೆಯು ಒಂದಾಗುತಾ ವಂದೇ ಮಾತರಂ ಎನ್ನೋಣ
ರಾಷ್ಟ್ರದ ಮಹಾತ್ಮನಾಯಕರನು ಸರ್ವ ಕಾಲವು ಜಪಿಸೋಣ
ರಾಷ್ಟ್ರದ ಪಿತಾಮಹರ ಮಹತ್ವವ ಮನದಲಿ ಸ್ಮರಿಸೋಣ.

ಹಿಂದೂ, ಮುಸ್ಲಿಂ, ಕ್ರೈಸ್ತರ ಒಗ್ಗಟ್ಟಿನ ಕೀರ್ತಿ ಕಳಸ ಮೇಲೇರಿಸೋಣ
ಎಲ್ಲಾ ಸೇರುತಾ, ಜೈ ಹಿಂದ್ ಎನ್ನುತ, ಶಿರವ ಬಾಗುತ ನಮಿಸೋಣ
ಒಂದೇ ತಾಯಿಯ ಮಕ್ಕಳೆನ್ನುತ ಭಾರತಾಂಬೆಗೆ ಕೈ ಮುಗಿಯೋಣ
ದಿನನಿತ್ಯವು ದೀಪದ ಬೆಳಕಂತೆ ಬೆಳಗುತಿರಲಿ ನಮ್ಮೀ ಹೊಂಗಿರಣ.

- ಎಂ.ಎಸ್. ಮಹೇಂದ್ರ

# ಆ ಸಂಜೆಯಲಿ...

ಬಾನಂಗಳದ ವರ್ಣಚಾಪವನ್ನೀಕ್ಷಿಸಿ
ಚಿತ್ರಿಸಲು ನಿಂತ ಬಾಲೆಯ ನಿಜದ ಸಂತಸದಲ್ಲಿ
ಹಲವು ಬಣ್ಣಗಳ ಕಾಣುವೆನು.

ಒಂದೆರಡು ನಿಮಿಷದಿ ಮರೆಯಾದ ಮಳೆಬಿಲ್ಲಿಗೆ
ಜೀವನವಿಡೀ ಕನವರಿಸುವ ಕಲಾವಿದೆಯ
ಬೇಸರಕೆ, ಆಗಾಗ್ಗೆ ಮೂಡಿ ಮರೆಯಾಗುವುದೀ ಕಾಮನಬಿಲ್ಲು.

ವಿಧವಿಧ ಬಣ್ಣಗಳ ಬಗೆಬಗೆಯಲ್ಲಿ ಬೆರೆಸಿದರೂ
ಅವಳಂದು ಕಂಡ ಬಣ್ಣಗಳಾಗುವುದಿಲ್ಲ
ಸಹಜ ಸೌಂದರ್ಯದ ಪ್ರಕೃತಿ ಕೋಮಲ ಕೈಗಳ
ಕುಂಚದಲಿ ನಕಲುಚಿತ್ರದಂತಿಹಳು.

ದೂರದ ಬೆಟ್ಟಗಳ ಸಾಲಿನೆಡೆಗೆ ನೋಡುವಾಗ
ಮೋಡಬೆಳಕುಗಳ ಮೈತ್ರಿಯಲಿ ತೇಲಿಬರುವ
ವಿನೂತನ ಸಂತಸದಲ್ಲಿ, ಬಣ್ಣಗಳ ಕಣ್ಣಾಮುಚ್ಚಾಲೆ
ನಡೆದೇ ಇದೆ ಪ್ರತಿಕ್ಷಣವು.

ಅವಳು ನಿಂತು ಕಾಮನಬಿಲ್ಲಿನೆದುರು
ತನ್ನ ಕನಸುಗಳ ಬಣ್ಣವ ಹಾಡಿಕೊಳ್ಳುತ್ತಿರಲು
ಆಕೆಗೆದುರಾಗಿ ತಂಬೆಲರಂತೆ ಸುಳಿಯುವೆನು
ಆಕೆಗೆ ಹಿತವಿರಲಿ ಸುಖವಿರಲಿ.

**- ಹೆಚ್.ಎಸ್. ಶೇಖರ್,** *ಸೋಮವಾರಪೇಟೆ*

# ನಮ್ಮ ಸೈನಿಕರು

ಇವರೆ ನೋಡಿ ನಮ್ಮ ಸೈನಿಕರು
ರಾಷ್ಟ್ರ ರಕ್ಷಣೆ ಮಾಡುವರು
ಹಗಲು-ಇರುಳುಗಳ ಭೇದವ ತೊರೆದು
ಮಳೆಯೆ ಬರಲಿ ಬಿಸಿಲೆ ಇರಲಿ
ತಮ್ಮ ಕಾಯಕವ ಮಾಡುವರು.

ಮಾತಾ-ಪಿತರ ಭಕ್ತಿಯ ನೆನಪಿನಲಿ
ಅರ್ಧಾಂಗಿಯ ಒಡನಾಟದ ಕನಸಿನಲಿ
ಒಡಲಕುಡಿಗಳ ಮಮತೆಯ ಬಯಕೆಯಲಿ
ಬಂಧು-ಬಾಂಧವರ ಭಾವನಾತ್ಮಕ ವಿರಹದಲೂ
ರಾಷ್ಟ್ರ ರಕ್ಷಣೆ ಮಾಡುವರು....

ದುಗುಡ-ದುಮ್ಮಾನಗಳನು ಬದಿಗೆ ಸರಿಸಿ...
ದೂರಾಲೋಚನೆಗಳನ್ನು ದೂರ ಸರಿಸಿ
ಶಾಂತಿ ಕದಡುವ ಹಗೆಗಳೆಲ್ಲರ ಎದೆಯ ಬಗೆದು
ಕತ್ತಲಿನಲ್ಲೂ ನೆತ್ತರಿನ ಹೊಳೆಯನ್ನರಿಸಿ...
ರಾಷ್ಟ್ರ ರಕ್ಷಣೆ ಮಾಡುವರು....

ರಾಜಕೀಯ ರಂಪಾಟಗಳಿಗೆ ಕಿವಿಗೊಡದೆ
ಸ್ವಜಾತಿ-ವಿಜಾತಿಗಳ ಭೇದವ ಮರೆತು
ಬಹು ಧರ್ಮಿಯರು ಮಮತೆಯಿಂದ ಇಂದ ಬೆರೆತು
ಭಾರತಾಂಬೆಯ ಒಡಲ ಭವ್ಯತೆ ಸಾರುತ್ತಾ....
ರಾಷ್ಟ್ರ ರಕ್ಷಣೆ ಮಾಡುವರು...

ಜಾತ್ರೆ, ಹಬ್ಬ, ಹರಿಸೇವೆಗಳ ಆಹ್ವಾನವಿಲ್ಲದೆ
ಬಂಧು-ಬಾಂಧವರ ಆಲಿಂಗನವಿಲ್ಲದೆ
ಬಾಂಬು, ಬಂದೂಕು, ಗುಂಡುಗಳ ಭರಾಟೆಯಲ್ಲಿ
ಸಾವಿನ ಭಯದಲ್ಲೂ ಭಾವನಾತ್ಮಕ ಬದುಕನ್ನು ಹೊತ್ತು
ರಾಷ್ಟ್ರ ರಕ್ಷಣೆ ಮಾಡುವರು || ರಾಷ್ಟ್ರ||

ಭಾರತಾಂಬೆಯ ಗಡಿನಾಡೆ ಇರಲಿ, ನಡುನಾಡೆ ಇರಲಿ
ನೆಲ-ಜಲ, ಸಕಲ ಸಂಪತ್ತಿನ ಹೊಣೆಯನ್ನೊತ್ತು
ಬಗಲಿಗೆ ಬಂದೂಕುಗಳ ಭಾರವನಿತ್ತು
ದಿನವೆಲ್ಲಾ ದಣಿದು, ನೊಂದು ಬೆಂದರೂ...
ರಾಷ್ಟ್ರ ರಕ್ಷಣೆ ಮಾಡುವರು...|| ಇವರೆ||

**- ಬಿ. ಸಿದ್ಧರಾಜು ಬೆಳ್ಳಪ್ಪ, ಮದೆ**



# ಕನಸುಗಳು ಮಾರಾಟಕ್ಕಿವೆ !

ಅತೃಪ್ತಿಗೊಂಡು ಅನಾಥವಾದ
ವಾತ್ಸಲ್ಯಕ್ಕೆ ನಿಸ್ಪೃಹದಿಂದ ಸಂತೈಸುವ ತನಕ
ಅನ್ನದಗುಳಿನ ಮೇಲೆ ಹಸಿದವರ
ಹೆಸರು ಆ ದೇವರು ಕೆತ್ತುವ ತನಕ
ನಮ್ಮ ಕನಸುಗಳು ಮಾರಾಟಕ್ಕಿವೆ!

ಮಾಸದ ಬಿಳಿಹಾಳೆ ಮನಸಿನ ಮೇಲೆ
ಮೋಸದ ಗೀಟು ಗೀಚುವುದು ನಿಲ್ಲುವ ತನಕ
ಕೈಕೆಯ ಕೋರಿಕೆಗಳು ಕೊನೆಯಾಗಿ
ಒಳ್ಳೆಯ ತನದ ವನವಾಸ ಮುಗಿವತನಕ
ನಮ್ಮ ಕನಸುಗಳು ಮಾರಾಟಕ್ಕಿವೆ!

ಕೊನೆಯಿಂದ ಕೋರಿಕೆಯ ಕತ್ತಿಯಿಂದ
ನಿಸರ್ಗದಂಗಾಂಗ ಕತ್ತರಿಸುವುದು ನಿಲ್ಲುವ ತನಕ
ಏಕಲವ್ಯನ ಭಕ್ತಿಯನೆ ಮುಂದು
ಮಾಡಿ ಹೆಬ್ಬೆರಳು ಬೇಡುವುದು ನಿಲ್ಲುವ ತನಕ
ನಮ್ಮ ಕನಸುಗಳು ಮಾರಾಟಕ್ಕಿವೆ!

ಕಾಯಕದ ಖಾದಿ ವಸ್ತ್ರಕೆ ಲಂಚದ ಗಂಜಿ ಅದ್ದಿ
ನಿತ್ಯವೂ ಗಾಂಧಿಯನು ಗಲ್ಲಿಗೇರಿಸುವುದು ನಿಲ್ಲುವತನಕ
ಉಸಿರು ಬಿಗಿ ಹಿಡಿದ ಮಲ್ಲೆ ಮೊಗ್ಗಿನ
ತೋಟದಲ್ಲಿ ತುಪಾಕಿಯ ಸದ್ದಡಗುವತನಕ
ನಮ್ಮ ಕನಸುಗಳು ಮಾರಾಟಕ್ಕಿವೆ!

- **ಮೋದೂರು ತೇಜ**, *ವಿರಾಜಪೇಟೆ*

# ದುಃಖವಿಲ್ಲದವರ ಹಾಡುಗಳು

ಹೀಗೆ ಹಾಡುತ್ತಲೇ ಬಂದಿದ್ದೇವೆ-
ಉಂಡ ಗಂಜಿ ಜಠರದೊಳಗೆ ಬೂದಿಯಾದರೂ...
ಒಡಲ ಉರಿಗೆ ಹೊಟ್ಟೆ ತುಂಬಿದೆಯೆಂಬ
ತಾತ್ತ್ವಿಕ ತೃಪ್ತಿಯಲ್ಲಿ!

ದುಃಖವೆಂದರೆ ಏನು?
'ಇಲ್ಲ'ವೆಂಬ ವಿಷಣ್ಣ ನಿರ್ವಾತ ಸ್ಥಿತಿಯೇ?
'ಇದೆ'ಯೆಂಬ ಮಾಗಿದ ಹಣ್ಣೇ ಅಥವಾ ಹುಣ್ಣೇ?
ಈ ವಜ್ರಬಾಹುಗಳೊಳಗೆ ಅಡಗಿ ಕುಳಿತ
ದೇವರ ಅಂಗಿ ಹಿಡಿದು ಹೇಳುತ್ತೇವೆ-
ನಮಗೆ ದುಃಖವಿಲ್ಲ!

ಈ ಬಯಲ ಆಲಯ
ಆ ಬಾನ ಬಯಲು
ಎಂಬೀ ಗುರುಗಳ ಸಂಗದಲ್ಲಿ
ಬಯಲಾಗಿ-ಬಾನಾಗಿ
ಕಣ್ಣೀರಿಲ್ಲದ, ಗೋರಿಗಳಿಲ್ಲದ
ನಮ್ಮ ಧ್ಯಾನಸ್ಥ ಹಾಡುಗಳಲ್ಲಿ
'ಪೂರ್ಣ ವಿರಾಮ'ಗಳಿಲ್ಲ!

'ಇಲ್ಲ' ಎಂಬುದರೊಳಗೆ 'ಇದೆ'ಯೆಂಬುದಿದೆ-
ಬಾಗಿದ, ಮಾಗಿದ ಮಾಂಸದ ಕಾಂಡ
ಜುಳು, ಜುಳು ಹರಿವ ರಕ್ತದ ತೀರ್ಥ,
ಬಿರಿದು 'ಗಂ' ಎನ್ನುವ ಹಲ್ಲುಗಳ ಹೂವು-
ತುಂಬಿ ತುಳುಕುವ ಮಿದುಳ ಕೊಡ-
ಸೆಗಣಿಯೋ-ಕಲ್ಲೋ-ಮಣ್ಣೋ
ಮಳೆಯೋ-ತೇಗುವ ಹೊಟ್ಟೆಯೊ...

ಅದಕ್ಕೇ, ಹಾಡುತ್ತಲೇ ಇರುತ್ತೇವೆ
ನಮಗೆ ದುಃಖವಿಲ್ಲ
ನಮಗೆ ದುಃಖವೇ ಇಲ್ಲ!!

- ಕಾಜೂರು ಸತೀಶ್ ಕೆ.ಎನ್., ಶಿಕ್ಷಕ

# ಕಂದನ ಪ್ರಶ್ನೆ ?

ಪ್ರಾಥಮಿಕ ತರಗತಿಯಲ್ಲಿ
ಓದುವ ಪುಟ್ಟ ಮಗು
ಪತ್ರಿಕೆಯಲ್ಲಿ ಕಂಡ ದಪ್ಪ ಅಕ್ಷರಗಳನ್ನು
ಜೋಡಿಸಿಕೊಂಡು ಓದುತ್ತಾ ಓದುತ್ತಾ
ಅಮ್ಮನನ್ನು ಈ ರೀತಿ ಕೇಳಿತು
ಅಮ್ಮ ಎಚ್1 ಎನ್1
ಎಂದರೆ ಏನು?
ಕೆಲಸದ ನಡುವೆ ಉತ್ತರಿಸುವಳು ಅಮ್ಮಾ!
ಅದು ಒಂದು ಸಾಂಕ್ರಮಿಕ ರೋಗ ಪುಟ್ಟಾ...

ಹಾಗೆಂದು
ಭಯ ಪಡಬೇಕಿಲ್ಲಾ, ಚಿಕಿತ್ಸೆ ಇದೆ ಅದಕ್ಕೆ
ಮಗು ಎಲ್ಲವೂ ಅರ್ಥವಾದಂತೆ ಓ.. ಹೋ...
ಎನ್ನುತ್ತಾ ಮತ್ತೊಂದು ಪುಟ ತೆರೆದು
ಅಕ್ಷರ ಜೋಡಿಸಿ, ಜೋಡಿಸಿ ಓದುತ್ತಾ
ಅಮ್ಮ ಪಕ್ಷಾಂತರ ಎಂದರೆ ಏನು?
ಎಂದು ಮುಗ್ಧವಾಗಿ ಪ್ರಶ್ನಿಸಿದ ಮಗುವಿಗೆ

ತಾಯ ಉತ್ತರ
ಅದೂ ಒಂದು ರೀತಿಯ ಸಾಂಕ್ರಮಿಕ ರೋಗ ಪುಟ್ಟಾ
ಆದರೆ ಅದಕ್ಕೆ ಚಿಕಿತ್ಸೆ ಇಲ್ಲಾ?
ಅಮ್ಮನ ಮಾತಿಗೆ ಮಗು ಹೇಳುತ್ತೆ
ಅಯ್ಯೋ ಪಾಪ....!?

- ಆಶಾ ಶುಭಾಕರ್, ಸೋಮವಾರಪೇಟೆ

# ಹುಡುಕಾಟ


ಹುಡುಕಿ ಹುಡುಕಿ ಹೆಕ್ಕುತ್ತಿದ್ದೇನೆ
ಕಳೆದು ಹೋದ ನನ್ನ ಕವನದ ಸಾಲುಗಳ
ಒಂದೊಂದು ಪದಕ್ಕಾಗಿ...
ಪದಗಳ ಅಕ್ಷರಗಳಿಗಾಗಿ...
ಮುಂಬೈ ನಗರಿಯಂತಹ ಸ್ಲಂಗಳಲ್ಲಿ
ಸ್ಲಂಗಳಲ್ಲಿನ ನಾರುವ ದೇಹಗಳ
ಭರವಸೆಯ ಕಣ್ಣಗಳಲ್ಲಿ...

ಅರಸುತ್ತಿದ್ದೇನೆ.... ಚಿಂದಿ ಆಯುವ
ಮಕ್ಕಳ ಕೈಗಳಲ್ಲಿ ಜೀವ ತುಂಬುವ
ಪಾಟಿಯೊಂದನ್ನು.... ಬಳಪವನ್ನು....
ಸಿಂಬಳ ಮೆತ್ತಿರುವ ಆ ಮೊಗಗಳಲ್ಲಿ
ಶೋಧಿಸುತ್ತಿದ್ದೇನೆ, ವಿಶ್ವಾಸದ ಗಾಂಭಿರ್ಯ
ಬದಿಯಲ್ಲದ ರಸ್ತೆ ಇಕ್ಕೆಲಗಳಲ್ಲಿ
ಕೋಲ್ಮಿಂಚಿನಂತೆ ಓಡಾಡುವ ಹುಡುಗರಲ್ಲಿ...

ಕನವರಿಸುತ್ತಿದ್ದೇನೆ... ಹಣ್ಣು ಹಣ್ಣು
ಮುದುಕರಿಗೆ ಧೈರ್ಯ ತುಂಬುವ
ಊರುಗೋಲುಗಳಿಗಾಗಿ...
ಬತ್ತಿ ಹೋದ ಜೀಮೂತ ಜೀವಕಳೆಯ
ಜೊನ್ನ ಜೀವಂತಿಕೆಗಾಗಿ...
ನಮ್ಮೂರ ಮನೆಮನೆಯ ಮೂಲೆ
ಸಂದುಗಳಲ್ಲಿ... ನಿಬಿಡ ಸಂತೆಗಳಲ್ಲಿ...

ಕದ ತಟ್ಟಿ ಹುಡುಕುತ್ತಿದ್ದೇನೆ
ಮರೆತು ಹೋದ ಪ್ರೀತಿಸಿದ
ಹುಡುಗಿಯ ಮುಂಗುರುಳಿಗಾಗಿ...
ನಕ್ಕಾಗ ಗುಳಿಯಿಡುವ ಆ ಕೆನ್ನೆಗಳಿಗಾಗಿ...
ಕೆಂಪು ದೀಪದ ಬೀದಿಗಳಲ್ಲಿ
ನಿಹಿತ ಭಾವನೆಗಳನ್ನು ಹೊಸಕಿಕೊಂಡ
ನಿಸ್ತೇಜ ಲಲನೆಯರ ಅಂತಃಕರಣಗಳಲ್ಲಿ.

**- ಮಣಜೂರು ಶಿವಕುಮಾರ್**, *ಕೊಡಗು*



# ಕ್ರಾಂತಿಯಾಗಬೇಕು !

ಎತ್ತರದ ಏಣಿ ಬಳಸಿ
ಚಂದ್ರಯಾನ ಕೈಗೊಳ್ಳಬೇಕು
ರಜನಿಯೊಡಲ ಬಗೆದು
ಸೂರ್ಯ-ಗ್ರಹ-ನಕ್ಷತ್ರಾದಿಗಳಲ್ಲಿ
ಕಡತಂದ ಬೆಳಕಿನ ತುಣುಕುಗಳ
ಬಡವರ ಹಟ್ಟಿಗಳಿಗೆ ರವಾನಿಸಬೇಕು.

ಅಖಿಲಾಂಡಕೋಟಿ ಬ್ರಹ್ಮಾಂಡ ಪಾಲನಿಗೊಂದು
ಕಾಗದ ಗೀಚಿ ಜಗದ-ಗೋಜಲುಗಳಿಂದ
ನಿನಗೇನು ಲಾಭ? ಎಂದು ಕೇಳಬೇಕು
ಅವನು ಪೇರಿಸಿಟ್ಟ ವೈರುಧ್ಯಗಳ
ಧಿಕ್ಕರಿಸಲು, ಕ್ಷಿಪಣಿ ತಯಾರಿಸಬೇಕು
ಅವನ ಗೆದ್ದು ಅರಾಜಕ ಸಾಮ್ರಾಜ್ಯಕ್ಕೆ
ಮುಕ್ತಿ ಹಾಡಬೇಕು...

ಯುದ್ಧ ಗೆಲ್ಲಲಾಗದೆ ಹೋದರೂ
ಮುಗಿಯಲಾರದ ಕ್ರಾಂತಿಗೆ ಮುನ್ನುಡಿ ಒದಗಿಸಬೇಕು
ಕತ್ತು ಬೀರುವವರ ಕಣ್ಣು ತೆರೆಸಬೇಕು
ಸಿಡಿದೇಳುವ ಸೈನಿಕನಾಗಬೇಕು ಪ್ರತಿ ನೊಂದ ಮನಸ್ಸು
ದಾಸ್ಯದ ಸಂಕೋಲೆಗಳ ಹರಿದುಕೊಳ್ಳಬೇಕು
ಕಟ್ಟು ಬಿಡಿಸಿಕೊಂಡು ಮುಕ್ತರಾಗಬೇಕು ನಾವೆಲ್ಲ...
ಕ್ರಾಂತಿಯಾಗಬೇಕು ಇಲ್ಲೆಲ್ಲ....!

**- ಉದಯಕುಮಾರ್ ಎಂ.,** *ಸೋಮವಾರಪೇಟೆ*

# ಸಿ.ಎಂ. ಸಾಹೇಬ್ರಿಗೊಂದು ಮನವಿ

ಇಂದು ಮೊದಲ ಪೂಜೆ
ಆರತಿ, ಅಕ್ಷತೆ
ನೇಗಿಲಯೋಗಿಗೆ
ಸಭೆಯಲ್ಲಿ ಪ್ರಾರ್ಥನಾ ಗೀತೆ
ನೇಗಿಲು ಹೊತ್ತ ರೈತರಿಗೆ

ಸಿ.ಎಂ. ಸಾಹೇಬರೇ
ನಾನು ರೈತ ಮಹಿಳೆ
ಕೇಳಿ ನನ್ನ ಮೊರೆ
ಈ ದೇಶದ ಬೆನ್ನೆಲುಬೆಂದು
ನಮ್ಮನ್ನು ಹಾಡಿ ಹೊಗಳುವುದು
ಬೇಡ
ದುಡಿದೂ ದುಡಿದೂ
ನಮ್ಮ ಬೆನ್ನು ಗೂನಾಗಿದೆ

ಮಣ್ಣು ಹೊತ್ತೂ ಹೊತ್ತೂ
ಕೆಂಪಾದ ನಮ್ಮ ಹರಕು ಸೀರೆ
ಎಷ್ಟು ಉಜ್ಜಿದರೂ
ಬಿಳುಪಾಗದ ಮಸಿ ಹಿಡಿದ
ಅಲ್ಯೂಮಿನಿಯಂ ಪಾತ್ರೆ
ವಿಧಾನಸೌಧದ ಎ.ಸಿ. ರೂಮಲ್ಲಿ
ಕುಳಿತ ನಿಮಗೆ ಕಾಣಲಿಕ್ಕಿಲ್ಲ

ಬನ್ನಿ, ನಿಮ್ಮ ಕುರ್ಚಿಯಿಂದ
ಕೆಳಗಿಳಿದು ಹೊಲಕ್ಕೆ ಬನ್ನಿ
ನೇಗಿಲು ತುಕ್ಕು ಹಿಡಿಯುತ್ತಿದೆ
ನೊಗಕೆ ಗೆದ್ದಲು ಹಿಡಿದಿದೆ
ಎತ್ತುಗಳು ಹಸಿವಿನಿಂದ
ಕಿರಿಚಾಡುತ್ತಿವೆ
ತುಂಡು ಭೂಮಿ ಒಣಗಿಹೋಗಿದೆ

ಅಕ್ಕಿ, ಬೇಳೆ, ತರಕಾರಿಯ ಬೆಲೆ
ಮುಗಿಲು ಮುಟ್ಟಿದೆಯೆಂದು
ಐದಂಕಿ ಸಂಬಳ ಬರುವ
ಪೇಟೆಯ ಮಂದಿ
ಬಾಯಿ ಬಡಿಯುತ್ತಾರೆ
ಗೊತ್ತಿರಲಿ ನಿಮಗೆ
ಅವನ್ನೆಲ್ಲ ಬೆಳೆವ
ರೈತನಿಗೆ ಸಿಗುವುದು
ಪುಡಿಗಾಸು ಮಾತ್ರ
ಅವನ ಬೆನ್ನಿಗಂಟಿದ
ತುತ್ತಿನ ಚೀಲ
ತುಂಬುವುದೇ ಇಲ್ಲ

ನಮಗೆ ನೇಗಿಲಯೋಗಿಯೆಂಬ
ಪ್ರಶಸ್ತಿ ಬೇಡ
ಪುರಸ್ಕಾರ ಬೇಡ
ನಾವು ಬೆಳೆವ ಬೆಳೆಗೆ
ಯೋಗ್ಯ ಬೆಲೆ ಕೊಡಿ
ಅಷ್ಟೇ ಸಾಕು; ನಮಗೆ ಅಷ್ಟೇ ಸಾಕು.

(ಇಂದು ಆಗಸ್ಟ್ 15,2009) - **ಸಹನಾ ಕಾಂತಬೈಲು**, *ಬಾಲಂಬಿ*

# ಮೌನದ ನಿಟ್ಟುಸಿರು!

ಕಾರ್ಗತ್ತಲು ಕಣ್ಣೀರಿಗೆ ಸಾಕ್ಷಿ
ಕಾರ್ಗತ್ತಲಷ್ಟೇ!
ಕತ್ತಲೆದೆಯೊಳಗೆ ಬೆಳದಿಂಗಳ ಚೆಲ್ಲಿ
ಹುಸಿನಗುವ ಬೀರಬಾರದಿತ್ತು!?
ಕದ್ದು ಕುಳಿತ ದುಃಖ ಸಾಲು
ದೂರದ ಕೊಂಬೆಗಳಲ್ಲಿ ಊಳಿಡುತ್ತಿರುತ್ತದೆ!!
ಕತ್ತಲ ಸೀಳಿ ಬರುವ ಶಬ್ದದಲೆಗಳಲ್ಲಿ

ಕೆಲವು ಮನಸ್ಸುಗಳು ಅರಳುತ್ತಿರಬಹುದು;
ಒಡೆದ ಹೃದಯಗಳಿಗೆ ಲೆಕ್ಕವಿಟ್ಟವರ್ಯಾರು?!
ಹೃದ್ಯದಿ ಬೆಚ್ಚಗೆ ಕುಳಿತು ಅದೃಶ್ಯವಾದಾಗ
ಆಘಾತದಿ ಬಿರಿವ ಹೃದಯಗಳಿಂದ

ಅದಾವ ಕನಸು ತಾನೇ ಉಸಿರಾಡೀತು?
ಸತ್ತ ಕನಸುಗಳು ಎದೆಯೊಳಗೇ ಸಮಾಧಿಯಾದಾಗ
ಬೆಳದಿಂಗಳಾದರೇನು? ಬಿರುಬಿಸಿಲಾದರೇನು?
ಕಂಗಳಲ್ಲಿ ಕಾರ್ಮೋಡ ಕವಿದು ನಿತ್ಯ ಮಳೆಗಾಲವಷ್ಟೇ!!
ಬದುಕು ಬಿಸಿಲ ಹೂವಲ್ಲ; ನಿಜ. ಆದರೆ,
ಕಾರಣವೇ ಗೊತ್ತಿಲ್ಲದೆ ಉದುರುವ ಹನಿಗಳಿಗೆ
ಮೌನದ ನಿಟ್ಟುಸಿರಲ್ಲದೆ ಬೇರೇನಿದೆ ಕಾಣಿಕೆ?

- **ಸುಮೇಶ್ ಎಂ.ಆರ್.,** ಗೋಣಿಮರೂರು

# ನಾನು ನಾನಾಗಲಿಲ್ಲ

ಮೊನ್ನೆ ಪಕ್ಕದ ಮನೆಯ ಪದುಮಕ್ಕನ ಹದಿಹರೆಯದ ಮಗಳು ಹರಿಣಾಕ್ಷಿ
ತಲೆತಿರುಗಿ ಕರ್ರನೆ ಕಾರಿಕೊಂಡಾಗ ನೆರೆಹೊರೆಯ ಕಿಟಕಿ ಬಾಗಿಲುಗಳು
ಪಟಪಟನೆ ತೆರೆದು, ಕಾರಿದ ಸದ್ದಿಗೆ ವದಂತಿಯ ಮೊಳಕೆ ರೆಕ್ಕೆಪುಕ್ಕಗಳೊಡನೆ
ಥಟ್ಟನೆ ಚಿಗುರಿ, ಆಗಸದೆತ್ತರಕೆ ಬೆಳೆದು ಗರಿಗೆದರಿ ಗರುಡಹದ್ದುಗಳಾಗಿ
ಕುಕ್ಕಿಕುಕ್ಕಿ ತಿನ್ನತೊಡಗಿದಾಗ ಬೆದರಿದ ಹರಿಣಾಕ್ಷಿ, ಮನೆ ಎದುರಿನ
ಗೌರಿಕೆರೆಗೆ ಹಾರಿದವಳು ಮತ್ತೆ ಮೇಲೇಳಲಿಲ್ಲ.

ನಿನ್ನೆ ನೀರವತೆಯ ಇರುಳಲ್ಲಿ, ಆ ಗೌರಿಕೆರೆಯ ಎದುರಲ್ಲಿ
ಒಬ್ಬನೇ ಕುಳಿತು ಕಣ್ಣೆವೆ ಮುಚ್ಚದೆ ಎದುರು ದೃಷ್ಟಿ ಹಾಯಿಸಿದಾಗ
ಬಾನಂಗಳದಲ್ಲಿ ತುಂಬು ತಂಗದಿರ ಚೆಲ್ಲಿದ್ದ ಹಾಲುಕೋಲನು ಹಿಡಿದು
ಜೋಕಾಲಿಯಾಡುತ್ತಾ ಮೈಮರೆತು ಜಾರಿ ಧರೆಗಿಳಿದ ಆ
ಅಗಣಿತತಾರೆಗಳು ನೀರತೆರೆಗಳನು ಅಲ್ಲೋಲಕಲ್ಲೋಲಗೊಳಿಸಿ
ನರ್ತಿಸುತ್ತ ನನ್ನನಣಕಿಸಿದವು.

ನನ್ನಲ್ಲಿ ಧೀಮಂತಿಕೆಯಿದ್ದರೆ, ತುಸುವಾದರೂ
ಛಲವಿದ್ದರೆ, ವದಂತಿಗಳು ಕೊಬ್ಬಿ
ರಣಹದ್ದುಗಳಾಗುವ ಮೊದಲೇ ಅವುಗಳ
ರೆಕ್ಕೆಪುಕ್ಕಗಳ ಕತ್ತರಿಸಿ, ನಿರ್ಭೀಡೆಯಿಂದವಳ ಕೈ ಹಿಡಿದು ನನ್ನ
ಮನೆ ಮನವ ಬೆಳಗಿಸಿಕೊಳ್ಳಬಹುದಿತ್ತು.

ಆದರೆ, ಜನಸಮೂಹದಲಿ ಗೌಣವಾಗುವ ಭೀತಿಗಳಿಗಳುಕಿ
ಸಮಾಜದ ಪ್ರತಿಷ್ಠೆಯೇ ಪ್ರಮುಖ ಮಾನದಂಡಗಳಾಗಿ
ಅವಳನುಳಿಸಲಾಗದ ನಾನು ನಾನಾಗದೆ, ಗಣ್ಯನಾಗಿಯೇ
ಉಳಿದು ತನ್ನತನವ ನಶಿಸಿಕೊಂಡ ನಪುಂಸಕನಾದೆನೇ
ಎನ್ನುವ ಅಳುಕು ನನ್ನನ್ನೀಗ ಕಾಡುತ್ತಿದೆ.

- ಕಿಗ್ಗಾಲು ಎಸ್. ಗಿರೀಶ್, ಮೂರ್ನಾಡು

# ಎಲ್ಲಿಗೀ ಪಯಣ...

ಎತ್ತಣದೀ ಹೊರಟಿಹ ಬೆಳ್ಳಕ್ಕಿಯೊಂದು
ಗರಿಗೆದರಿ ಹಾರಾಡಿ ಬರುತಿರಲು ಗಾಳಿಯಲಿ
ನೀಳನೆಯ ಕಾಲ್ಗಳನು ಮುದುಡಿರಲು
ಹೋಗುತಿದೆ ಮುಂದಕೆ ಮುಂದಕೆಲ್ಲೋ...

ತಂಗಾಳಿ ಬೀಸುತಲಿ;
ಒಡನಾಡಿಗಳ ಹುಡುಕುತಲಿ;
ತನಗೆಲ್ಲೋ ಕಾದಿರಿಸಿದೆ; ಎನಗಾಗಿ
ಎನ್ನ ಹೃದಯದಲಿ ಸೇರುವ
ಬಯಕೆಯನ್ನೊತ್ತು; ಗಿರಿಶಿಖರದಲಿ
ಅಡವಿಯೆಡೆಯಲಿ; ಸಾಗರದಾಳದಲಿ
ಉಬ್ಬರವಿಳಿತದ ಅಬ್ಬರದೊಳಗೆ
ಏನೇನೋ ಆಸೆಗಳೆಡೆಯಲ್ಲಿ....

ಮನದ ಪಂಜರದೊಳಗಿಹ ಗುಬ್ಬಿಯನ
ತವಕದಲಿ ಕಾಯುತಿಹ ಹೃದಯಗಳಂತೆ
ಬೆಳ್ಳಕ್ಕಿ ಮನದಾಳದಿ ತನ್ನುಸಿರ
ಸೇರಬಯಸು; ರೆಕ್ಕೆ ಬಡಿದು
ಆಸೆಯಾ ಕಣ್ಗಳ ಹೊತ್ತು, ಹಾರುತಿದೆ, ಹಾರುತಿದೆ ಮುಂದೆ...

- ಸುವಿನ ವಿ.ಆರ್., ಸುಳ್ಯ

**ಕೊಡವ ಕವನ**

# ಪಟ್ಟಾಳಕಾರ ಪೊನ್ನು ಪಾಡ್‌ಚೆನ್ನನೆ...

ಜಯ, ಜಯ, ಜಯ, ಜನ್ಮಭೂಮಿ
ಜಯ ದೇವ ಮಾದೇವ ಮೊಟ್ಟ್‌ಟ್ಟ ಭೂಮಿ
ಕುಂದ್ ಕುಡುಪುಳ್ಳ ಸ್ವರ್ಗಭೂಮಿ
ಕೋಗಿಲೆ ಗಾಯಿತ್ರಿ ಮಂತ್ರ ಎಣ್ಣುವಳಾ ಭೂಮಿ
ಶೃತಿ, ರಾಗ, ತಾಳ, ಲಯ... ಕಾತ್‌ಲುಳ್ಳಾ ಭೂಮಿ
ಸಮುದ್ರ ದೇವಿಯೇ ನೆಲೆ ನಿಂದ ಪುಣ್ಯಭೂಮಿ

ಪಡಿಂಞಾರ್ ಕುಂದ್, ಬ್ರಹ್ಮಪಾದ
ಅಡಿಕ್‌ಟ್ಟ್ ಅಳ್‌ತ ಭೂಮಿ
ಉದ್‌ಚಿ ಕಾವೇರಿ ತುಳ್ಳಿಯಂಡೊಕ್ಕುವಳಾ
ಕೊಡವ ನಾಡ್‌ಲ್, ನಾಕುಂಡ್
ಕೊಡವ ಮುಯ್ಯಾಳ್ ಕೂಟಿಯಂಡ್
ನಾಡಜ್ಜ ನಯಿಚಿ ಬೆಚ್ಚ ಆಯಿರಬಟ್ಟಿ ಭೂಮಿ.

•

ಆದರೆ, ಆರಿದ್ರ ಮಳೆ ಕಾತ್‌ಲ್ ಉತ್ತ್‌ಕಳ್‌ತತ್
ನಾಡಪ್ಪ ಗಪ್ಪು, ಚೋಮ ಚಾತ ಮಂಡಂಗಳ ಕಟ್ಟಿ
ಪಾಡಿಯಂಡ್ ಹರ, ಹರಾ, ಹೀ, ಹೀಂದ್
ಪಡ್‌ಕಿ ಮಂಡಂಗಳ ಸಾಲೋಳ ತಯಿತತ್
ಆದರೆ ಪೊನ್ನಾಟಿ, ಕಟ್ಟೆ ಕರೆ ಬೇಲ್‌ಲೆಲ್ಲಾ
ಓಡುವಳ ನಾಟಿರ ನಡುಲೋರ್ ಸಾಲ್ ನಾಟಿ

ಚಿಜ್ಯಾರ್ ಪದ್‌ನೆಟ್ಟಾಂಗ್ ಮಂದ್ ಮಾನಿಲೆಲ್ಲಾ
ಪುನ್ನಾರತ್ ಪೂಜುವಳ ತೋಕ್ ಕತ್ತಿನಾ
ಪೊನ್ನ್ ಬೊಳಕ್‌ಲ್ ಆಯುಧ ಪೂಜೆಯೋ
ಚಿಣ್ಣಪ್ಪ ಬಪ್ಪಳ ಬೊಳ್ಳೆ ಕಳ್ಳೆಡ್‌ತ್, ಅಂದೋಳತ್
ಅಣ್ಣ, ಅಪ್ಪಂಡ ಕೂಡೇ ಅಳ್‌ಪಿಚಿಟ್ಟ್ ಬಳಂಬುವಳಾ
ಎನ್ನಡವ್ವ, ಚೋದಾನ ಪಂದಿಕರಿ ಕಡುಂಬುಟ್ಟ್ ||

ತೊಲಿಯಾರ್ ತಿಂಗ ತೊಡಕ್ ಚಿತ್ತಾ ನಕ್ಷತ್ರತ್
ತೆಳಿ, ತೆಳಿಚಂಡ್ ಮುಹೂರ್ತಕ್ ಸೆರಿಯಾಯಿ
ತಳ, ತಳಾಂದ್ ಉಕ್ಕಿ ಬಕ್ಕು ನೀರ್‌ರ ಮಾಲೆ
ಮಾಲವಂಗಕೆಲ್ಲಾ ಕೋತ್‌ನಕಲೂ ತೀರತ ತೀರ್ಥ
ಕಲಿಕಾಲತೂ ದರ್ಮಉಳ್ಳ ನೆಲ ಕೊಡಗ್‌ಲ್
ಉಳ್‌ಂಜಿತುಂಡದಾ ದೇವಡ ಮಯಾಂಗಳಿ ||

ಬಲ್ಯ ಪುತ್ತರಿ ನಮ್ಮೆಯೋ ಕೇಟಿತಿಕ್ಕು ನೀ
ಬಲ್ಯ ಆಕತ್ ನೆಲ್ಲ್ ನುಲಿ ಬೊಳೆಯೋ
ಬೊಳ್ಯಪ್ಪಣ್ಣ ನೆಲಚಿ ಬೊಳಿಲ್ ನುಲಿ ಕೊಜ್ಜತದೋ
ಬಲ್ಯಪ್ಪ ಏರಿಲ್ ನಿಂದ್ ತಿತ್ತ್ ಬೊಡಿ ಬೆಪ್ಪಕ
ನೆಲ್ಲ್‌ನುಲಿ ಕೈಲ್ ಪುಡ್‌ಚ ನಾ ಪೊಲಿ ಪೊಲಿಂದೆಣ್ಣಕ,
ಕಾಳುಡ ಕೈಲಿಂಜ ಆನೆ ಪಿಟಾಕಿ ಡಂ, ಡಮಾರ್ ||

ಕೇರಿ, ಮಡಿಕೇರಿ, ಕಾವೇರಿ ನಾಡೋ
ಬಾರಿ, ಬಾರಿ ಬೆಂದುವಳೇ, ಭಾರತಾಂಬೆರ
ತರಾವರಿ ಭಾಷೆ ನೆರಿಪಿರಿವದುಂಡದೋ
ಪೊರಿಪೊಟ್ಟಿಚಿಡುವಳಾ ಸಪ್ತಸ್ವರ.... ಸರಿಗಮ...
ಬಾರಿ ಕಾವೇರಿಯಮ್ಮೆರ ಮಣ್ಣ್‌ಲ್
ಏರ ಕೊರತ್ ಬಾಂಗ್‌ಡನ... ವಂದೆಮಾತರಂ.....

**- ಕಾರೋಟಿರ ಶಶಿ ಸುಬ್ರಮಣಿ,** *ಪಾಲಿಬೆಟ್ಟ*

# ನಂಗಡ ಮಣ್ಣ್ - ನಂಗಡ ನಾಡ್

ಜಗಕೊಂದೇ ಕೊಡಗ್ ಇದೇ ನಂಗಡ ನಾಡ್
ಇಂಜತಂದ್ ಕಾಡ್, ಪ್ರಾಣಿ ಪಕ್ಷಿಯಡ ಗೂಡ್
ಇಂದ್ ತೇಗ, ಬೂಟಿ, ಚಾಂದ್ ಮರ ಎಲ್ಲಾ ಮಾಯ
ಕೊಡಗ್‌ಲ್ ಕೊಡವ ಎಲ್ಲಿ ಉಂಡ್ ನೆಲೆ ನಿಂದಿತ್ ಪರಕೀಯ.

ಬೇಲ್‌ಲ್ ಇಂಜತಂದ್ ಬೊಳಿಯ, ದೊಡ್ಡಿ, ಸಣ್ಣಕಳಮೆ
ಇಂದ್ ಮಾಡಿಯಂಡುಂಡ್ ಇಂಜಿ ಇದೇ ಬೇಲ್‌ಕ್ ನಾಶ
ಪಚ್ಚೆತೊಪ್ಪ್, ಚಾಣ ಗೊಬ್ಬರ ಭೂಮಿಕ್ ಇಲ್ಲತಾಚಿ
ರಸಗೊಬ್ಬರ ಪೆದತ್ ಭೂಮಿಕಾಚಿ ಯೂರಿಯಾ, ಅಮೋನಿಯ.

ಕಾಂಪೋಸ್ಟ್ ಸಾವಯವತ್‌ರನ್ನತ ಶಕ್ತಿ ಗೊಬ್ಬರ ಎನ್ನಾಚಿ
ಅಂಕೆ ಇಲ್ಲತೆ ಕಂಪೆನಿ ಗೊಬ್ಬರ ಚಾಡ್‌ಚಿ ಏರ ಫಸಲ್‌ಕ್
ಇಂತಾ ಫಸ್‌ಲ್ ಕಂಪೆನಿ ಗೊಬ್ಬರವೇ ಆಧಾರಾಚಿ
ಕಂಪೆನಿ ಉದ್ಧಾರಾಚಿ ನಂಗಡ ಮಣ್ಣ್‌ಲ್ ಸಾರ ಇಲ್ಲತಾಚಿ.

ಮಣ್ಣ್‌ರ ರಸಸಾರ ರಕ್ಷಣೆಕ್ ಸಾವಯವವೇ ಗತಿ
ಮಣ್ಣ್ ನಂದಾನಕ ಮಣ್ಣ್‌ರ ಮಕ್ಕಡ ಗತಿ ಎಲಂಗುವ
ಮಣ್ಣ್‌ಲ್ ಸಾರ ಇಲ್ಲೇಂಗಿ ಮಿಂಞತ ಪೀಳಿಗೆರ ಗತಿ ಎಂತ?
ಮಣ್ಣೇ ನಂಗಕ್ ಸರ್ವಸ್ವ, ಮಣ್ಣೇ ನಂಗಕ್ ರಕ್ಷಕ.

ಭೂಮಿ ಉಪ್ಪಾನ ಕಾಂಬದೇ ಅಪರೂಪ
ಭೂಮಿ ಬೆಚ್ಚಂಡ್ ಅಕ್ಕಿಕ್ ಬೋಡುವ ಭಿಕ್ಷೆ
ನೆಲ್ಲ್ ಬೊಳತತವಂಗ್ ಭೂಮಿ ಎನ್ನಂಗ್?
ಮಣ್ಣ್ ಉಳ್ಳ, ಲಾಭಕಲ್ಲ, ಪೀಳಿಗೆರ ಉದ್ಧಾರಕ್.

ಏಳಿ ಎದ್ದೇಳಿ ರೈತ ಬೆಂದುವಳೇ
ಕೃಷಿಯಂತ್ರ, ವಿಜ್ಞಾನ ಸಲಕರಣೆ ಕೂಟಿ
ಪೇಕೇಟ್ ಪಾಲ್ ಸುಲಭ, ಅದಂಗಿಲ್ಲೆ ಕರಂದ ಪಾಲ್‌ರ ಸತ್ವ
ನೈಚಿತೆಡ್‌ತ ನೆಲ್ಲ್‌ರಕ್ಕಿ ತಿಂದವಂಡ ಆರೋಗ್ಯಾಯುಷ್ಯ ಕಲ್ಲ್.

ಕಾಪ್ಪಿ, ಯಾಲತ್ ಕೈದುಂಬಾ ಪಣ ಬಕ್ಕು
ಮೇಲ್ ದುಂಬಾ ಚಿಂಗಾರ ಆಕು
ಬೊಳೆ ಇಲ್ಲೇಂಗಿ ಕೈಲ್‌ಪೊವುದ್ ಚಂಗ್ರಾಂದಿ, ಪುತ್ತರಿ ಇಲ್ಲತಾಕು
ಬೊಳೆ ಇಲ್ಲೇಂಗಿ ಕಾವೇರಿ ಚಂಗ್ರಾಂದಿ ಇಗ್ಗುತಪ್ಪ ಕಾಣತಾಕು.

ನಂಗಡ ಮಣ್ಣ್ ನಂಗಕಿರಡ್ ಪರದೇಸಿಯ ಇಲ್ಲತಾಡ್
ಮಣ್ಣ್‌ನ ಮಾರಿತ್ ಪಟ್ಟಣ ಕೂಡುವ ದುರಾಸೆ ಬೋಂಡ
ಮಣ್ಣ್ ಇಲ್ಲೇಂಗಿ ನಂಗಕ್ ಕಾಡೂ ಇಲ್ಲೆ, ನಾಡೂ ಇಲ್ಲೆ
ಏಳಿ ಎದ್ದೇಳಿ ಪೋರಾಟಕ್....!
ಕೊಡಗ್‌ರ ಮಣ್ಣ್ ಕೊಡಗ್‌ಕಾರಕೇ ಇರಡ್.

- ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ



# ಎಲಂಗುವಾ.... ನಾಡ್

ಗೆಜ್ಜೆ ತಂಡ್‌ಡಾ ಮುರು ಚುಲ್‌ಕಿ
ಅಜ್ಜಪ್ಪನರಂದತ್ ಆರೋಡತ್

ದೇವಕಾಡ್ ಬಲ್‌ಚಿ ಕೂಟಿ
ದೇವಮರ ಕಟ್ಟ್‌ಮಾರಿ
ಪೋಲಿ ಪೋಕ್‌ರಿ ದುಂಬಿತ್ ನಾಡ್‌ಲ್

ವಕ್ಕಡ ವಕ್ಕಾಮೆ ನಾಡ್‌ರ ತಕ್ಕಾಮೆ
ಮುಡ್‌ಂಜೋಚಿ ನಾಡ್‌ಲ್

ತೂಟ್‌ಂಗಳತ್ ಚಾವು ಬೆಚ್ಚಿ
ಕುಪ್ಪಿ ಕಳ್ಳ್‌ಡ ಬಾರಣಿ
ಸೂಟ್ ಬೂಟ್‌ಲೆ ಒಪ್ಪಮಾಡು
ಪೆತ್ತ ಕುಂಞಿಯ ಅರ್‌ಂಜಿತೇ...?

ಪೈಸಾರಿಯೆಲ್ಲ ಮಾಳಾಯಿ
ಪೋಕ್‌ರಿಯಡ ಪಾಲಾಯಿ
ಕುಂದ್‌ತರ್‌ಚಿ ಮಣ್ಣ್ ಮಾಂದಿ
ಬೆತ್ತಲೆನಾ... ದೇವಬನ
ಎತ್ತಕಡ್‌ಚಿಯ ಮೇವಕಿಲ್ಲತೆ
ಚಾಕಾಳಿಯಾಯಿ ಚತ್ತತೋ....


ಒಬ್ಬಳೊತ್ತೆ ನಾಡ್‌ಲಿಪ್ಪಕ್
ನೆಟ್ಟಿ ಪೋನಕಾಲತ್
ನಡುಬಗ್ಗಿ, ತಡಿನೋಲ್‌ತಿ
ನಯಿಪವನಿಲ್ಲೆ ನಾಡ್‌ಲ್

ವಕ್ಕ ಪೆರಿಯ ಪಟ್ಟೆದಾರ
ಊರ್‌ತಕ್ಕ ನಾಡ್‌ತಕ್ಕ ದೇವತಕ್ಕ ಮಮ್ಮಾಯಾ

ಆಚಾರ-ವಿಚಾರ, ನಡ್‌ಪು-ಕೊಡ್‌ಪು
ಕಾಂಗತಾಚಿ
ಆಟ್‌-ಪಾಟ್‌, ಕೊಂಬ್‌-ಕೊಟ್ಟ್‌
ಕಾಡ್‌ಕೂಡಿ

ವಕ್ಕ-ಮಕ್ಕ ಒರ್ಮೆಕೂಡಿ
ಪಳೆಯಾಮೆ ಎದ್ದ್‌ ಕತ್ತಿ
ಸಂಸ್ಕೃತಿ ಉಳಿಯಡ್‌- ನಾಡ್‌ಲ್‌

- ಮೂವೇರ ರೇಖಾ ಪ್ರಕಾಶ್, ಬಲ್ಲಮಾವಟಿ



# ಪಣತ್‌ರ ಬೀರ್ಯ

ಜನಕ್ ಇಂಜತ್ ಚಾಯಿರ ಪ್ರೀತಿ
ಮರೆಯಾಯಿಂಡುಂಡ್ ಬದ್‌ಕ್‌ರ ನೀತಿ
ಗುಣ ಮನಕ್ ಇಂಜತ್ ಇಲ್ಲಿ ನೆಲೆ
ಪ್ರೀತಿ ಇಕ್ಕ ಬೊರೀ ದುಡ್ಡ್‌ರ ಮೇಲೆ
ಬಲ್ಯವನ ಕಾಂಬಕ ತಕ್ಕಾರೆ ಬೋರೆ
ಬಡವನ ಕಾಂಬಕ ದುಂಡ್ ಓರೆ ||

ನ್ಯಾಯ ಧರ್ಮ ಬಟ್ಟೆ ತಪ್ಪ್‌ಚಿ
ಅನ್ಯಾಯ ಅಕ್ರಮ ಮಂಡೆ ನೇತ್‌ಚಿ
ಪಣಕಾಯಿತ್ ನಡ್‌ಪ ಕೊಲ್ಲ್ ಕೊಲೆ
ಪ್ರಾಣಕ್ ಇಲ್ಲತಾಯಿತ್ ಏದೂ ಬೆಲೆ
ತಡಿ ದುಂಬಾ ಕೇಡ್ ಕಿಚ್ಚ್‌ರ ಚೋರೆ
ಉಪಕಾರ ಅರಿಯತ ಪಾಳ್‌ರ ಜನ ಏರಾ||

ಪುಣ್ಯತ್‌ರ ಫಲ ಈ ಮನುಷ್ಯ ಜನ್ಮ
ಅರ್‌ಂಜವಂಡು ಎಲ್ಲಾರು ಬದ್‌ಕ್‌ರ ಮರ್ಮ
ಮಾಡ್ಯೋಳಿ ನಲ್ಲಾಮೆ ನಲ್ಲರಿಕೆರ ಗಂಟ್
ಬೋಂಡ ನಂಗಕ್ ಬೊರೀ ಪಣತ್‌ರ ನಂಟ್
ಚತ್ತಲ್ಲಿ ಪಾಡುವ ಮನುಷ್ಯಂಡ ಗುಣ
ಬಾಯಿ ಬುಡತಿ ಪಾಪಿಯಳೆ ಪಣ ಪಣ||

- ಕೊಂಗೀರಂಡ ದಮಯಂತಿ, ಮಡಿಕೇರಿ

# ಚಾಯಿ ಮೂಡಿ

ಚಾಯಿ ಮೂಡಿ ಕನ್ನಿಯೇ
ಕೊಡಗ್ ನಾಡ್‌ರ ಪೊನ್ನಿಯೇ
ಕಣ್ಣೆಡ್‌ತ್ ನೋಟಿಯೆ
ನೀಡ ಚಾಯಿ ಕೊದ್‌ಚಿಯೆ!

ನೀಡ ನಾಮಸ್ಮರಣೆ, ನಾಡ
ಹೃದಯ ದುಂಬಾ ಬೀವಡ್
ಭಾವಕರಿಯತೆನ್ನ ನೀನ್
ನಿಂದ ನೀರ್ ಮಾಡತೆ!

ತಪ್ಪು ನೆಪ್ಪುನರ್‌ಂಜ್‌ಲೆ
ಎದಿಕೆ ಪರೆವ ಕೈಂಜ್‌ಲೆ
ಪೆನ್ನೆಡ್‌ತ್ ಗೀಚಿಯೆ!
ಮನತ್‌ರೊಳ್‌ಕ್ ಕೂಟಿಯೆ!

ನನ್ನ ಮರ್‌ಂದ್ ಬಾವತೆ
ನನ್ನ ಬುಟ್ಟ್ ಪೋಕತೆ
ಪಾರಿ ಎಕ್ಕ ಪೋಪಿಯೋ
ಅಂದ್ ನಾನ್ ಚಾವಿನೋ!

- ರಂಜಿತ ಬಿ.ಎನ್., ವೀರಾಜಪೇಟೆ

# ಮಂಗಲಕ್ ಪೋಕನ....||

ಚಾಯಿಕರ್ತಿ ಮೂಡಿ ನಂಗ ಪೋಕನ
ತಂಗೆ ಕುಂಞರ ಮಂಗಲಕ್
ಬಾರೇ ಮೂಡಿ ನಂಗ ಪೋಕನ
ಪೂವಿ ಮೂಡಿರ ಮಂಗಲಕ್
ಉದ್ದತ್‌ರ ಜಡೆನ ಚೀಪ್ ಎಡ್‌ತ್ ಊಕಿ
ಪಾಂಬ್‌ರ ಮಾದರಿ ಜಡೆ ಕೆಟ್ಟ್ ಕೆಟ್ಟಿ
ಮಲ್ಲಿಗೆ ಪೂವ್‌ರ ಮಾಲೆ ಚೂಡಿ
ಬಾರೇ ಮೂಡಿ ನಂಗ ಪೋಕನ ಪೂವಿ ಮೂಡಿರ ಮಂಗಲಕ್ ||

ಕಾಲ್‌ಕ್ ದಂಡ್ ಕಾಲ್ ಚೈನ್ ಇಟ್ಟ್
ಕುದುರೆ ಕಾಲ್‌ರ ಕಾಲ್ ಜೋಡ್ ತೊಟ್ಟ್
ಪಟ್ಟ್ ಚೌಕ ಮಂಡೆಕ್ ಕೆಟ್ಟಿ
ಬಾರೇ ಮೂಡಿ ನಂಗ ಪೋಕನ ಪೂವಿ ಮೂಡಿರ ಮಂಗಲಕ್ ||

ಮೂಡ್‌ಕೆಲ್ಲ ಸ್ನೋ ಪೌಡರ್ ಬಳಂದ್
ನೆತ್ತಿಕೋರ್ ಚೋಂದ ಕುರಿ ಇಟ್ಟಂಡ್
ದವಡೆಕೆಲ್ಲ ಚೋಪ್ ಕಲರ್ ಬಳಂದಂಡ್
ಬಾರೇ ಮೂಡಿ ನಂಗ ಪೋಕನ ಪೂವಿ ಮೂಡಿರ ಮಂಗಲಕ್ ||

ಬೋಳೆ ದುಂಬ ಪೌನ್ ಮಾಲೆ ಕೊಯಿತಂಡ್
ಅದ್‌ಂಡ ಮೇಲೆ ಪತ್ತಾಕ್ ಕೆಟ್ಟಿಯಂಡ್
ಕೆಮಿಕ್ ದಂಡ್ ಜುಮ್‌ಕಿ ತೂಕಿಯಂಡ್
ಬಾರೇ ಮೂಡಿ ನಂಗ ಪೋಕನ ಪೂವಿ ಮೂಡಿರ ಮಂಗಲಕ್ ||

ಬೊಟ್ಟ್ ಪೊಡಿಯ ನೆರಿಬೆಚ್ಚಿ ಉಡ್‌ತಂಡ್
ಜಾಕಿಟ್, ಬ್ಲವುಸ್ ಮೇಲ್‌ಕ್ ಕೊಯಿತಂಡ್
ಕೈದುಂಬ ಚಿಂಗಾರ ಬಳೆ ಇಟ್ಟಂಡ್
ಬಾರೇ ಮೂಡಿ ನಂಗ ಪೋಕನ ಕುಂಞಿ ಮೂಡಿರ ಮಂಗಲಕ್ ||

ಅಂಜಿ ಬೆರಕು ಪೊಮ್ಮೊರ್ಯ ಕೊಯಿತ್
ಕಿರಿದುಂಬ ಲಿಪ್‌ಸ್ಟಿಕ್ ತೇಚಿ
ಕೈಕಾಲ್‌ಕೆಲ್ಲ ನೈಲ್‌ಪಾಲಿಶ್ ಇಟ್ಟ್
ಚಾಯಿಕರ್‌ತಿ ಮೂಡಿ ನಂಗ ಪೋಕನ
ತಂಗೆ ಕುಂಞಿರ ಮಂಗಲಕ್
ಬಾರೇ ಮೂಡಿ ನಂಗ ಪೋಕನ
ಪೂವಿ ಮೂಡಿರ ಮಂಗಲಕ್

- ಕಾಣತಂಡ ಎಸ್. ಮುತ್ತಪ್ಪ, ಭದ್ರಗೊಳ





**ಅರೆಭಾಷೆ ಕವನ**

# ಪ್ರಯಾಣ

ಬಸ್ಸ್‌ಲಿ ಹಕ್ಕಲೆ ನಿಂತ 60ರ
ಗಂಡಸ್‌ನ ಕಣ್ಣ ಸಂಚು |
ನಿಂತುಟ್ಟು ಬಿಳಿ ಬಣ್ಣದ ಸೂಟ್ ಧರಿಸಿ
ಆರಡಿ ಎತ್ತರದ ಕಪ್ಪನೆ ಠೊಣಪ
ಕೊಟ್ಟ ತೊಂದು ಮುಗುಳು ನಗೆ |


ಹೋಗ್ತಾ ಹೋಗ್ತಾ ಹತ್ರ ಬರ್‍ತಾ ಇತ್ತ್
ಠೊಣಪ
ಮೈಗೆ ಮೈ ತಾಗಿಸಿ | ದುರ್‌ಗುಟ್ಟಿ ನೋಡ್‌ಕನ
ಕೇಳ್‌ತ್ ಸ್ಸಾರಿ ಹಲ್ಲು ಗಿಂಜಿ|

ಬಸ್ಸ್ ಹೋಗ್ತಿದ್ದಂಗೆ ಪ್ರೀತಿ
ಉಕ್ಕುತ್ತಾ ಉಟ್ಟು
ದಾರಿ ಸಾಗುದೇ ಗೊತ್ತಾಗ್ತ ಇಲ್ಲೆ ಅವಂಗೆ|
ಅವಳ್ ಮುದುಡಿಕ್ಕಂಡ್ ನಿಂತಷ್ಟ್
ಕುಷಿ ಪಡ್ತಾ ಉಟ್ಟು ಅಂವ
ಮೈಗೆ ಮೈ ತಾಗಿಸುದ ಬುಟ್ಟ್
ಶುರುಮಾಡ್ತ್ ಕಾಲ್ ಕೆರೆಯಕೆ |

ಇನ್ನೆಂಥ ಮಾಡ್‌ದುತ್ತ ಗ್ಯಾನ ಮಾಡ್ತ್ ಅವ್ಳು
ಬುಟ್ಟರೆ ಹೋದೆ ಕೆ.ಎಸ್.ಆರ್.ಟಿ.ಸಿ. ಬಸ್ಸ್
ಕಲಿಸಿನೆ ಇವಂಗೆ ಬುದ್ಧಿನಾಂತ
ಒತ್ತಿತ್ ನೋಡಿ ಬಸ್ಸ್‌ನ ಬ್ರೇಕ್ ನಂಗೆ

ತನ್ನ ಹೈ ಹೀಲ್ಡ್ ಚಪ್ಪಲ್‌ಂದ ಅವ್ನ ಕಾಲ್‌ನ
ಕಿರುಬಾಡಿರೆ ಹೋದೆ ಅವ್ನ ಮಾನ
ಹಲ್ಲ್ ಬ್ಯಾರೆ ಕಟ್ಟಿಸಿತ್ತ್ ನೋಡಿ
ತಡೆಯಕ್ಕೆ ಆಗದೆ ಕರ್‌ತ್ ಮೆಲ್ಲಂಗೆ
'ಮ್ಯಾಡಮ್' ಅಂತ
ಬಿದ್ದ್ ಹೋತ್ ನೋಡಿ ಹಲ್ಲ್ ಸೆಟ್ಟ್ ಎಲ್ಲಾ ಒಂದೇ ಸರಿ
ಕೇಳ್ತಾ ಕೇಳ್ತಾ ಸ್ಸಾರಿ ಆತ್ 101 ಬಾರಿ
ಅಂವ ಹೇಳ್‌ತ್ ಮಾಡಿಕಿಲ್ಲೆ
ಇನ್ನೊಂದು ಸಾರಿ ಹಿಂಗೆ....!

- ಕಡ್ಲೇರ ಆಶಾ ಧರ್ಮಪಾಲ ಪ್ರಭು, ಮಡಿಕೇರಿ



# ಕಾಲ ಮಹಿಮೆ

ಇದೆಲ್ಲ ಕಾಲ ಮಹಿಮೆಯಣ್ಣ
ನಮ್ಮದೀಗ ಇಬ್ಬಂದಿ ಸ್ಥಿತಿಯಣ್ಣ
ಮುಂದೆನ ದಾರಿ ಗೊತ್ತಾಗ್ತಿಲ್ಲೆ
ಹಿಂದೆ ಹೋಕೆ ಸುತರಾಂ ಮನ್ಸಿಲ್ಲೆ

ಕಾಫಿ ಬೆಳೆ ನೆಲಕಚ್ಚ್‌ತುಟ್ಟು
ಮೆಣ್ಸ್ ಬಳ್ಳಿ ಸೊರ್ಗ್‌ತುಟ್ಟು
ಯಾಲಕ್ಕಿ ಬೆಳೆ ಅವಸಾನ ಆಗ್ತುಟ್ಟು
ಮಣ್ಣ್‌ನ ಮಕ್ಕಳೆಲ್ಲ ಅನಾಥರೀಗ
ಭೂಮಿ ತನ್ನ ಸತ್ವ ಕಳ್ಕಂಡುಟ್ಟು

ರಾಸಾಯನಿಕ ಕೃಷಿ ಸೋತಂಗುಟ್ಟು
ಸಾವಯವ ಕೃಷಿ ಭರವಸೆಯಾಗುಟ್ಟು
ಹಟ್ಟಿಗೊಬ್ಬರ ಎರೆಗೊಬ್ಬರ
ಮತ್ತೆ ಬಳಕೆಗೆ ಬರ್ತಾಉಟ್ಟು
ಎಲೆಗೊಬ್ಬರ ಇಂದ್ ಬೇಕಾಗಿಟ್ಟು
ಜೀವಾಮೃತ ಭೂಮಿಗೆ ಅಮೃತ ಕೊಡ್ತಾಉಟ್ಟು

- ಕುಲ್ಲಚನ ಕಾರ್ಯಪ್ಪ, ಕುಂಬಳದಾಳು

# ಭ್ರಮೆ

ಗಾಳೀಲಿ ಹಕ್ಕಿ ನೀರ್‌ಲಿ ಮೀನ್
ಭೂಮೀಲಿ ನಾವ್ ನೀವ್
ನಮಿಗಾಗಿ ಎಲ್ಲಾ ಇನ್ನಾರಿಗೂ ಅಲ್ಲ
ಭ್ರಮೆಯೊಳಗೆ ನಾವ್ ಎಲ್ಲಾ
ಎಲ್ಲಿ ನೋಡಿರೂ ಅಲ್ಲಿ ಅನುಮಾನದ ಹುತ್ತ
ಭುಗಿಲೆದ್ದ ಹೊಗೆಯ ಆಟ
ಗಡಿ ಗಡಿಗೆ ಆಗಾಗ
ಗಡಿಗಡಿಗೆ ಗಡಿ ತಂಟೆ
ಜಲ-ಜಗಳ ಬಳುವಳಿ!

ಗಡಿ-ಜಲ ಇರೋಮುಟ್ಟ ಜಟಾಪಟಿ
ದೊಡ್ಡಾಟ ನಿತ್ಯ ಕಟ್ಟಿಸಿದ ಬುತ್ತಿ
ಹೊಗೆಯಾಟ ನಿತ್ ನಗೆ ರಟ್ಟೆ ಬರೊಕು
ಪೊರ್ಲಾಕು ನಾಕ್ ದಿನದ ಬದ್ಕ್
ಅಪ್ಪ ನೆಟ್ಟಿತ್ ಭತ್ತ
ಮಂಜ ನೆಟ್ಟುಟು ಭಂಗಿ
ಬದಲಾತ್ ಬದ್ಕ್ ಪೂರಾ
ಝಣ ಝಣ ಹಣದ ಮುಂದೆ
ಗುಣ ಎಲ್ಲಿ ಅಡಂಗ್ಯುಟ್ಟು?
ಗುಣ ಅಡಂಗಿಟು 'ಹಣ'ದ ಗೋರಿಯೊಳಗೆ
ಸಮಯ ಇದ್ದರೆ ಬನ್ನಿ ಗುಣನ ಹುಡ್ಕನೊ
ಹಣದ ಗೋರಿಯೊಳಗೆ

- ಬಿ.ಆರ್. ಜೋಯಪ್ಪ, ಮದೆ

ತುಳು ಭಾಷೆಯ ಕವನ

# ಕಾವೇರಿಗ್ ಸೊಲ್ಮೆ

ಕಾವೇರಿ-
ತಲಕಾವೇರಿ ಉಗಮ ತ್ತಾನೋಡು ಪುಟ್ಟ್‌ದ್
ಜನೋಕ್ಲೆನ ಮೈಮನಸ್ ಪೊರ್ಲುಡು ತಟ್ಟ್‌ದ್
ಪರಪುವಲ್ ಉದ್ದೋಗು
ಏಳ್‌ನೂತ ಅಜಪತ್ತೈನ್ ಕಿಲೋಮೀಟರ್‌ಗು
ಮುಟ್ಟೆ ಮುಟ್ಟೆ ಇಪ್ಪುನಾ ಕನ್ನಡ ತಮಿಳ್ ಮಣ್ಣ್‌ಗ್
ಪರ್ಬುನ ನೀರ್ ಈ ಜೀವಕೊರ್ಪಿ ನೀರ್‌ಗ್.

ಕವೇರ ಋಷಿನ ಮಗಲ್
ಲೋಪಾಮುದ್ರೆ, ಕಾವೇರಿ ಪನ್ಪಿ ಪುದಾರ್‌ದಾಲ್
ಜಪ್ಪುವಲ್, ಪರಪ್ಪುವಲ್
ಮಲೆಸಾಲ್‌ದ ಮದಿಮಾಲ್.


ತುಲಾ ಸಂಕ್ರಮಣದಾನಿ ಪ್ರತ್ಯಕ್ಷಲಾಪಿನ
ಕೊಡಗೆರೆ ಆರಾಧ್ಯದೈವವಾಯಿನ
ಈ ಪರಪ್ಪುವ ಮಸ್ತ್ ಮಸ್ತ್ ದೂರೋಗು
ಭಕ್ತರೆನ ಮನಸ್ಸ್‌ಗ್ ಆನಂದ ದಿಂಜಾಯರೋಗು.

ಗುಪ್ತಗಾಮಿನಿಯಾದ್ ಪರತ್ತ್‌ದ್
ಕನ್ನಿಕೆ ಸುಜ್ಯೋತಿನಕುಲೆನ್ ಸೇರ್‌ದ್
ಪರಪ್ಪುವ ಎಲ್ಯಾದ್ ಮೇಕೆದಾಟ್‌ಡ್
ಲಾಯಿಲಾಯಿತ್‌ದ್ ಸೇರ್‌ದ್ ಶಿವನಸಮುದ್ರಡ್.

ಕೊರುದು ಬೊಲ್ಪುನು ಕನ್ನಡ ರಾಜ್ಯೋಗು
ಪರ್ಪಾವ ನೀರ್‍ನ್ ಕನ್ನಡ ಜನಕ್ಕುಲೆಗು
ಪರತ್ ಸೇರುವ ಬಂಗಾಳಕೊಲ್ಲಿಗ್
ಕರ್ನಾಟಕ ತಮಿಳ್ನಾಡ್‍ದ ಗಡಿಪ್ರದೇಶೊಗ್.

ನಿನ್ನ ಪುದರ್ ಇಪ್ಪಡಪ್ಪೆ ಏಪಲಾ ಕಾವೇರಿಂದ್
ಬರ್ಪುನ ಬೋಡ್ಚಿ ವೈಮನಸ್ಯ ಅಂಚ ಇಂಚಾಂದ್
ಕಾವೇರಿ ನೀರ್ ಪರ್ಪಿನ ಜನಕುಲೆಗ್ ಬರಡೆಡ್ನೆ ಮನಸ್
ಮುಗಿಯಾಡ್ ಎಡ್ಡೇಡ್ ಕಾವೇರಿ ತುದೆ ನೀರ್‍ದ ವೈಮನಸ್.

- **ನೀರಬಿದಿರೆ ನಾರಾಯಣ,** *ಮಡಿಕೇರಿ*



# ಕೊಡಗ್

ಸುಂದರ ಪ್ರಕೃತಿ ಸೌಂದರ್ಯದ ಸುತ್ತಾ
ಪ್ರವಾಸಿಲೆನಾ ಪ್ರವಾಸ ನಮ್ಮ ಕೊಡಗ್‌ದಂಚಿ||

ದುಂಬುದ ಕಾಲದ ರಾಜ-ರಾಣಿಲೆನಾ ಮನ ಉಲ್ಲಾಸಗ್
ಉದ್ಭವ ಆಯಿನಾ ಈ ರಾಜಾಸೀಟ್||

ಇನಿ ರಾಜಸೀಟ್‌ಟ್ ಕಾರಂಜಿದ ಸೊಬಗ್
ಅಬ್ಬಿ-ಇರ್ಪು ಜಲಧಾರೆದ ಪೊರ್ಲು||

ತಲಕಾವೇರಿ ಇಗ್ಗುತಪ್ಪ ಭಾಗಮಂಡಲ ದೇವಸ್ಥಾನದ ನಂಟ್
ಕಾವೇರಿ ಅಪ್ಪೆನಾ ಸಿರಿ ಸೊಬಗ್‌ದ ಕೊಡಗ್||

ಹಿಂದೂ-ಕ್ರೈಸ್ತ-ಮುಸ್ಲಿಂ ಜನಾಂಗದ ಈ ಕೊಡಗ್
ಭಾರತಾಂಬೆಯ ರಕ್ಷಣೆಗ್ ವೀರೆರೆನ್ ದಾನ ಮಂತಿನಾ ನಾಡ್||

ಕ್ರೀಡೆಗ್ ಕ್ರೀಡೆಕಲಿಕ್‌ಲೆನ್ ನೀಡ್‌ನಾ ಈ ನಾಡ್
ಇತ್ತೆ ಕೊಡಗ್‌ಗೊಂಜಿ ರಾಜ್ಯ ಆಪುನಾಸೆ... ಕೊಡಗ್‌ಗೊಂಜಿ
ರಾಜ್ಯ ಆಪುನಾಸೆ
ಈ ರಾಜ್ಯ ಬೋಡಾ-ಬೋಡ್ಚೆ ಇಂದೊಂಜಿ ನಿಗೂಢ||

- ಬಿ.ಎನ್. ಚೇತನ್, ಮದೆ

# ಏತೊಂಜಿ ಪೊರ್ಲುತಾ ಊರು

ಏತೊಂಜಿ ಪೊರ್ಲುತಾ ಊರು
ಉಂದು ಏತೊಂಜಿ ಪೊರ್ಲುತಾ ಊರು.....
ಪಚ್ಚೆ ನೇಜಿತಾ, ಗಂಧ ತೇಗತಾ, ಕಾಫಿ
ಏಲ ಎಡ್ಡೆ ಮುಣ್ಚಿತಾ....
ಸಾಲ್ ಸಾಲ್ ಬೆಟ್ಟ ಸಾಲ್...
ಪೊರ್ಲು ತೂಯೆರ ಕಣ್ಣ್‌ಗಿಜ್ಜಿ ಸೋಲು
ಕಾವೇರಿ ಪುಟ್ಟ್‌ತ್ ಪರಿಪುವ ಊರು
ಊರ್‌ನ ಪುಗರಂತಿನಕ್ಕುಲ್ ಏರ್?
ಸುಳಿಗಾಳಿ ಬೀಜುಂಡು, ನೀರ್ ಪರಿ
ಪುಂಡು ಪಚ್ಚೆ ನಿಸರ್ಗ ತೆಲಿಪುಂಡು
ಶೂರ, ವೀರೆರ್ ದೇಶನ್‌ಕಾಪೆರ್
ಬಲಿಕೊರ್ತೆರ್ ಪ್ರಾಣಾನೆ...
ಊರ್‌ತ ಮಣ್ಣ್‌ಗ್, ಋಷಿಮುನಿ
ಇತ್ತಿನ ಭೂಮಿತಪ್ಪೆಗ್ ಪೊರ್ಲುತಾ
ಮನಸ್ಸ್‌ಗ್ ಸೊಲ್‌ಮೆಲ್....

- **ಶ್ರೀಮತಿ ಬಿ.ಎಂ. ರೇವತಿ,** *ಮಡಿಕೇರಿ*

ವಿದ್ಯಾರ್ಥಿ ಕವನ

# ಕೊಡಗು

ವನಸಿರಿ ಸೊಬಗಿನಲಿ
ಮಡಿಕೇರಿ ಮೇಲ್ಮಂಜಿನಲಿ
ಕಂಗೊಳಿಸುವ ಕಾವೇರಿ ನಾಡಿನಲಿ
ಹಸಿರು ಚೆಲುವೆಯ ಮುಗ್ಧ ಮುಖದಲಿ
ಬಂದು ನೋಡು ನೀ, ಸವಿದು ನೋಡು

ನಿಸರ್ಗದ ಮಡಿಲಲಿ
ರಾಜಾಸೀಟು ಉದ್ಯಾನದಲಿ
ಪ್ರಕೃತಿಯ ಸಿರಿಯಪ್ಪಿಗೆಯಲಿ
ಧುಮ್ಮಿಕ್ಕೊ ಅಬ್ಬಿ ಫಾಲ್ಸ್‌ನಲ್ಲಿ
ಬಂದು ನೋಡು ನೀ ಸವಿದು ನೋಡು

ಕನ್ನಡ ನಾಡಿನ ಪುಟ್ಟ ಒಡಲಲಿ
ಮರಗಳ ನಾಡು ಸುಂದರ ಕಾಡು
ಕಾಫಿ, ಮೆಣಸು, ಏಲಕ್ಕಿಯ ನೋಡು
ಬ್ರಹ್ಮ, ಪುಷ್ಪ, ತಡಿಯಂಡ ಮೋಳ್ ನೋಡು
ಹಾಕಿಯ ತವರು ನೋಡು
ವೀರ-ಶೂರ-ಧೀರ ನಾಡು
ಬಂದು ನೋಡು ನೀ ಸವಿದು ನೋಡು

ತಿಮ್ಮಯ್ಯ-ಕಾರ್ಯಪ್ಪಜ್ಜನ ಹೆಮ್ಮೆಯ ಬೀಡು
ಸುಗಂಧ ಸೂಸಿದ, ಕಲೆ-ಸಂಸ್ಕೃತಿಯ ಹಾಡು
ಸಂಜೆ-ಮುಂಜೆ ಆಕಾಶವಾಣಿ ಹಾಡು
ನಾನಾ ತರದ ಮರಗಳ ಬೀಡು, ನಾಲ್ಕು ಕಡೆ ಹೋಗುವ ರೋಡು
ಬಂದು ನೋಡು ನೀ ಸವಿದು ನೋಡು

- ದಿವ್ಯಾ ಎಂ.ಎಂ., ಮಡಿಕೇರಿ
*ದ್ವಿತೀಯ ಬಿ.ಎ.*

# ಬಾನಿನ ಬೆಳಕು

ಮನೆ ಹೊರಗೋದೆ ರಾತ್ರಿಯಲ್ಲಿ
ಮೈ ಮನ ಸೆಳೆಯುವ ಆಗಸದಲ್ಲಿ
ನಗುನಗುತ್ತಿದ್ದ ಚಂದ್ರನ ಮುಖದಲ್ಲು
ಕತ್ತಲೆಯಾದರೂ ಕಾಮನಬಿಲ್ಲು!

ಚುಕ್ಕಿಯ ಸಾಲು ಸುತ್ತಲೂ ಬಂತು
ಸಾಲದು ಕಣ್ಣು ನೋಡಲಿಕ್ಕಂತು!
ಬಾನಿಂದ ಚೆಲ್ಲುವ ಬೆಳಕನ್ನು ಕಂಡೆ
ನಾನೊಂದು ಚುಕ್ಕಿಯಾದರೆ ಅಂದುಕೊಂಡೆ

ತಕ್ಷಣ ಸುತ್ತಲು ನಿಶ್ಯಬ್ಧವಾಯಿತು
ಮನೆಯೊಳಗಿಂದ ಕರೆಯೊಂದು ಕೇಳಿತು
ಸಂಶಯವಾಯಿತು ಅಮ್ಮನೇ ಎಂದು
ಓಡಿ ಚಾಪೆಯ ಹಿಡಿದೆ ಮಲಗಲಿಕ್ಕೆಂದು

ಕನಸಲೂ ಬೆಳದಿಂಗಳುಡುಗೆಯ ಧರಿಸಿವೆ
ಕಚಗುಳಿಯಿಡುವ ತಾರೆಗಳ ಹಿಂಡು
ಚಂದ್ರನ ಸಖಿಯಂತೆ ಕಿರೀಟ ಇಟ್ಟು
ಸಂತಸದಿ ನಲಿದೆ ಇರುಳನು ಉಂಡು..

- **ಪೌರ್ಣಮಿ ಕೆ.ಎಸ್.,** *ಗಾಳಿಬೀಡು, ಮಡಿಕೇರಿ*
*ಎಂಟನೇ ತರಗತಿ*

**ಹವ್ಯಕ ಭಾಷೆ ಕವನ**

# ಎಂಗಳದಲ್ಲವೇ?

**ಈ** ಜಗವೇ ಎಂಗಳದಲ್ಲವೇ ಸ್ನೇಹಿತರೇ
ಬಿತ್ತಿ ಬೆಳೀಲೇ ಬನ್ನಿ ಪ್ರೀತಿಯನ್ನ
ಸ್ನೇಹಭಾವ ಇಪ್ಪದು ಆ ಚಿಗುರೇ
ಹಸನುಗೊಳಿಸೇಕು ಬನ್ನಿ ಶಾಂತಿಯನ್ನು...

ಈ ನೀರೇ ಯಂಗಳದು ಗೆಳೆಯರೇ
ತಿಳಿಗೊಳಿಸೇಕು ಬನ್ನಿ ಜಲವನ್ನು
ನಿರ್ಮಲ ವಾರೀಲೀ ಇಪ್ಪದು ಆ ಹಸುರೇ
ಉತ್ತಿ ಬೆಳೆಯೇಕು ಬನ್ನಿ ಬೆಳೆಯನ್ನು

ಈ ವಾಯು ಎಂಗಳದು ಸ್ನೇಹಿತರೇ
ಸರಿಸೇಕು ಬನ್ನಿ ಮಾಲಿನ್ಯವನ್ನು
ಸ್ವಚ್ಛ ಹವೇಲಿ ಇಪ್ಪದು ಯಂಗಳ ಉಸಿರು
ನೀಡುವುದು ಎಂಗೊಗೆ ಚೈತನ್ಯವನ್ನು...

ಈ ಭೂಮಿ ಎಂಗಳದು ಗೆಳೆಯರೇ
ಪೊರೆಯೋಕೆ ಬನ್ನಿ ವಸುಧೆಯನ್ನು
ಕನಸು ನನಸಾಗಿಸೇಕು ಎಲ್ಲರೂ
ಭವ್ಯ ಭವಿತವ್ಯ ಕಾದಿರ್ತು ಎಂದೆಂದು...

- **ಅನುಪಮ ನೀರಬಿದಿರೆ,** ಮಡಿಕೇರಿ

ಕುಂಬಾರ ಭಾಷೆ ಕವನ

## ನಮ್ಮ ಭಾಷೆ ಕುಂಬಾರ ಭಾಷೆ

ಸಾವಿರ ಭಾಷೆಯ ನಡುವೆ
ನಗರ ದೇಶಗಳ ಮಧ್ಯೆ
ಪ್ರಾಣಿಗಳಾಗಲಿ, ಪಕ್ಷಿಗಳಾಗಲಿ
ಇವುಗಳೊಟ್ಟಿಲಾ ನಮ್ಮದೊಂದು ಭಾಷೆ
ಸುಂದರ ಕುಂಬಾರ ಭಾಷೆ

ನಾ ಬರೆದ ಕವನವ ನೀ ಕೇಣ್
ಇಲ್ಲಿ ನೋಡಿ ಅವರ ಕೇಡ್
ಅವರ ಜಗಳ ಇವರ ಜಗಳಾಂದ್
ಅವರ ಸಮಧಾನ ಮಾಡಕೆ ಹೋದಡೆ
ನಿಮ್ಮ ಬಾಯಿ ಮಣ್ಣ್ ಹಾಕಾಂದ್ ಹೇಳ್ತೋರ್

ಎಲ್ಲಿಯಾಡಿ ಹೋಕೂಂದ್ ಎರಟಡೆ
ಅಲ್ಲಿಲಾ ಬಂದು ಕಿರಿ ಕಿರಿ ಮಾಡ್ತೊ
ಅವಳ ಬಳೆಯೋ ಅವಳ ದುಂಡೋ
ಅವಳ ತುಟೀ ಒಂದು ಸೇರ್ ಮೆತ್ತೊಂಡುದೊಳು
ಅವ್ವೊ ಎನ್ ಬಂದೊ ರೋಗಾಂದ್

ಅವೊರಿ ಬೇಕಾದೊ ಕಟ್ಟಕ್ಕೆಲಾ ಕುಡಿಯಕ್ಕೆಲಾ
ಕುಡ್‌ಕೊಂಡ್ ಬಂದಡೆ ಫ್ರಿಜ್ಜೇ ಬಾತ್‌ರೂಮ್
ಊಟಿಲಾ ಇಲ್ಲ ತಿಂಡಿಯೂ ಇಲ್ಲ
ಚಪ್ಪರ್‌ಸಕ್ಕೆ ಎಲೆ ಅಡಿಕೆಲಾ ಇಲ್ಲ ಅದು
ಲಾಸ್ಟಿ ಗುಳಮನ ಇಟ್ಟಿ ಆತುತು.

- ಹೆಚ್.ವಿ. ಸುನಿತಾ, *ಬೆಟ್ಟಗೇರಿ*

ತಮಿಳು ಭಾಷೆ ಕವನ

## ಮಲೈಯೋರಮ್

ಮಲೈಯೋರಮ್ ವೀಸುಮ್‌ಕಾಟ್ರೆ
ಮಲೈಯುನಕ್ ಪಿಡಿತಿರುಕ್ಕಿರದ
ಮಲೈ ಯೆರಂಗುಮ್ ನಡಿಯೆ
ಮಲೈಯೇ ಉನಕ್ ಪಿಡಿರೈವಿಲ್ಲೆಯಾ
ಕೇಳ್ವಿಗಳ್ ವಂದ್ ಪೋನದ್
ಎನ್ ತಲೈಯಿಲ್
ನಾನ್ ಉಕಾಂರ್ದ್ದ ಪೋದು ಓರ್ ಮಲೈಯಿಲ್

ಕಾರ್ಡ್ ಸೊನ್ನದ್
ಮಲೈದಾನ್ ಎನ್ನೈ ತಾಂಗುಮ್
ನದಿ ಸೊನ್ನದ್ ಮಲೈಯೇ ವೀಡ್
ಪೋವದ್ ಎನ್ ವಿಧಿ
ನಾನ್ ಪಾದಿ ಮಲೈಪಾದಿ
ನಾಮ್ ಎಲ್ಲಾಮ್ ಒನ್ರೆ ಜಾದಿ

ಮಲೈಗಳೇ ಭೂಮಿಯಿಲ್
ಇರುಕ್ಕೀರಾಮೇ ಭೂಮಿ
ಉನಕ್ ಪಿಡಿತಿರುಕ್ಕಿರದ
ಮಲೈ ಸೊನ್ನದ್ ಎನ್ನೈ ಇಂಗ್
ವೈತವರ್ ಅಂದ ಸಾಮಿ
ನತ್ರಿ ಕಡನ್ ಅವರುಕ್ಕ್

ಎನ್ನೈ ನಾನ್ ಕೇಟ್ಟೇನ್
ಮಲೈಯಿಲ್ ಉಕ್ಕಾಂರ್ದ್ದ ಮಾನವನೆ
ಏನ್ ಉಕ್ಕಾಂರ್ದ್ದ್ ಇರುಕ್ಕಿರಾಯ್
ಎನ್ ಮನಮ್ ಸೊನ್ನದ್
ಉಲಗಮ್ ಪೆರಿದ್ ಅದೈ ಪಾಕತ್ತಾನ್
ವಾಳ್‌ವಿಲ್ ಮೇಲೈ ಏರೆತ್ತಾನ್

- ಟಿ.ಎನ್. ಅರ್ಜುನ್, ವೀರಾಜಪೇಟೆ

ತೆಲುಗು ಭಾಷೆ ಕವನ

## ಷಷ್ಠಿ ಪೂರ್ತಿ ದಾಟಿನಮನ ಸ್ವಾತಂತ್ರ್ಯಂ

**ಷಷ್ಠಿ** ಪೂರ್ತಿ ದಾಟಿನ ಮನಸ್ವಾತಂತ್ರ್ಯಂ
ಸಾಮ್ರಾಜ್ಯಾಲು ಚಕ್ರವರ್ತಿಲು ಜಮೀನ್ದಾರಿಲೇ ಕನುಮೊರಗಯ್ಯಾರು
ಕಾನಿ... ಇಪ್ಪುಡು ದೇಶಾನಿಕಿ ದೊಂಗಲು.... ಗಜದೊಂಗಲು ಪಡ್ಡಾರು

ಸಕಲ ರಂಗಾಲ್ಲೋ ಪರಿಣತುಲ್ಯೆನ ದೊಂಗಲು...!
ಅಪ್ಪುಡು... ತೆಲ್ಲದೊರಬುಗೂಡಾ ಇಲಾ... ದೇಶಾನ್ನಿ ದೋಚುಕೋ ಲೇದು
ಸ್ವಾತಂತ್ರ್ಯಾನ್ನಿ ತೆಚ್ಚಿಚ್ಚಿನ ಮಹಾತ್ಮುಲು ಅನಕುನ್ನದಿ ರಾಮರಾಜ್ಯಂ
ಕಾನಿ... ಇಪ್ಪುಡು ಮನಂ ಚೂಸ್ತುನ್ನದಿ ರಾವಣ ರಾಜ್ಯಂ... ರಾಕ್ಷಸುಂ ರಾಜ್ಯಂ
ಎಕ್ಕಡ ಚೂಸಿನ ದೊಂಗಲೇ ದೊಂಗಲು...!


ರೈತು-ಕಾರ್ಮಿಕುಲ ಪೇರುಲೋ ಅಧಿಕಾರನ್ನಿ ಪಟ್ಟುಕೊನಿ
ಪ್ರಜಾಪ್ರಭುತ್ವಂ ಪೇರುಲೋ ತಮ ವಾರಸತ್ವಾನ್ನಿ ಪೆಂಚುತೂ...
ಕೋಟ್ಲು-ಕೋಟ್ಲು ಡಬ್ಬುಲು ಮೂಟಗಡುತುನ್ನಾರು...
ವೀಳ್ಳಂದರೂ... ಮನ ದೊಂಗ ನಾಯಕುಲು...!

ನೀರುಪೇದುಲು-ಮಧ್ಯತರಗತಿವಾಳ್ಳು ಬ್ರತಿಕಿನಂತವರುಕೂ ಅಂತಂತೇ
ನಿತ್ಯವಸರ ವಸ್ತುವುಲ್, ಗಗನಾನಿಕಿ ಎಕ್ಕಿನ ಧರಲು... ಅಡಿಗೆವಾಳ್ಳು ಲೇರು
ಕಲ್ತೀ ಸರಕುಲು ಚೇಸಿ, ಅಮ್ಮು ಕುಂಟಾರು, ಡಬ್ಬು ಕೊಲ್ಲ ಗೊಡ್ತಾರು
ವೀಳ್ಳೇ ಮನ ಐ-ಟೆಕ್ ದೊಂಗಲು...!

ಈ ದೊಂಗಲಂದರಿಕೀ ಜಾಗತೀಕರಣಂ ಸ್ವರ್ಗ ಸೋಪಾನಂ
ರಾಮುಡಿ-ಕೃಷ್ಣುಡಿ ಲೆಕ್ಕ ಲಿಚ್ಚಿ ಅಂದರಿಕೀ ಮೋಸಂ ಚೇಸ್ತಾರು
ಕಾರಗಾರಂಲೋ ವುಂಡವಲಸಿನವಾಳ್ಳು, ವೆಲುಪುಲ್
ಮಹಾರಾಜುಲುಗಾವುನ್ನಾರು
ದೇಶೋದ್ಧಾರಂ-ಸಂಘಸೇವ ಪೇರುಲೋ ನಾಟಕಂ ಆಡುತುನ್ನ
ದೊಂಗಲು...!

ಈ ದೊಂಗಲು ದೊರಲೈ ವೆಲುಗುಕೊವುಂಟೇ...
ಈ ಸಾಮಾನ್ಯುಲನಿ ರಕ್ಷಿಂಚೇದಿ... ಪ್ರಜಾ ಪ್ರಭುತ್ವಾನ್ನಿ ನಿಲಬೆಟ್ಟೇದೆವರು?
ಈ ದೊಂಗಲಂದಿರಿನಿ ವಿಚಾರಣಲೇಕುಂಡಾ... ಉರಿತಿಯ್ಯಾಲಾ...?
ಲೇದಾ.. ಪುನಪ್ರಜಾಪ್ರಭುತ್ವಾನ್ನೇ ತೀಸೇಸಿ ಚಕ್ರವರ್ತಿಲಂ ಚೆಯ್ಯಾಲಾ

**- ಸಾಬಲಂ ಭೋಜಣ್ಣ ರೆಡ್ಡಿ,** ಕುಶಾಲನಗರ



## ಚುಟುಕುಗಳು

### ಕವನ

ಒಂದು ಕವನ ಬರೆಯಲು
ಬೇಕು ಸುಂದರ ಕವಿ ಹೃದಯ
ಆ ಹೃದಯದ ಒಂದು ಬಡಿತವೇ
ಅಕ್ಷರಗಳಾಗಿ ಹೊಮ್ಮಿದರೆ ಅದೇ ಸುಂದರ ಕವನ!
ಕವನ ಎಂದರೆ ಬರಿ ಸಾಲಲ್ಲ
ಪದಗಳಲ್ಲ ಅಕ್ಷರಗಳಲ್ಲ
ಅದು ಮನಸ್ಸಿನ ಭಾವನೆಗಳನ್ನು
ತಿಳಿಸುವ ನಯನವಿದ್ದಂತೆ

### ರಕ್ಷೆ

ದೇವಸ್ಥಾನಕ್ಕೆ ಹೋದರೆ
ದೇವರು ಮಾಡುವರು
ತನ್ನ ಭಕ್ತರ ಸುರಕ್ಷೆ
ಆದರೆ ಭಕ್ತರು ಮಾಡಬೇಕು
ತಮ್ಮ ಪಾದರಕ್ಷೆಯ ರಕ್ಷೆ.

### ಬದುಕುವ ಕಲೆ

ಬದುಕು ಒಂದು ಕಲೆ
ಇದನ್ನು ತಿಳಿದವನು ಭಲೆ
ಇದರಲ್ಲಿರುವುದು
ಹಲವಾರು ಅಲೆ
ಈಜಿ ದಡ ಸೇರಿದವನೇ
ಭಲೆ ಭಲೆ !

### ವಿಪರ್ಯಾಸ

ರಾಜಕಾರಣಿಗಳು
ಕೇಳುವರು ಬಿಡದೇ ಓಟು
ಓಟು ಸಿಕ್ಕಿದ ಮೇಲೆ
ಬಿಡರು ತಮ್ಮ ಸೀಟು
ಅಲ್ಲಿ ಹೊಡೆದಾಟ
ಎಳೆದಾಟ ಕುರ್ಚಿಗಾಗಿ
ಇಲ್ಲಿ ಬಡವರ ಪರದಾಟ
ತುತ್ತಿಗಾಗಿ.

- ಎ.ವಿ. ಮಂಜುನಾಥ್
*ವಿರಾಜಪೇಟೆ*

*English Poems*

# Fathomless Ocean...

Make me an Ocean my Lord!
So fathomless like thee.
Eternal is its love,
That nobody can tarnish it.
Deep is its knowledge,
That nobody can measure it.
Give me the motivation,
From the to and fro waves in motion.
Make me pure,
Like the foam in allure...
Make me an ocean,
So fathomless like thee.
Make me an ocean
Wherein I can kiss the sun,
Everyday when it sets and shines
The ocean!
Wher, it serves hundreds as abode
O Lord!
Make me that great abode!

***- Anushree A., Madikeri***

# My Mother

My Mother is the 'Best'
in the world
She is precious
than gold.

My mom is a
simple housewife
who Sacrifices everything
for my life.

My mother is one
who taught me to walk
with love and care
made me to talk.

If I cry
she makes me laugh
gives me strength
to overcome the tough.

In each and every walk
of my life
Mother's advice
makes me safe.


When I become
big and stronger
I make her feel
happy forever.

***- Monish V.J., Madikeri***

# ಕವಿಗೋಷ್ಠಿಯಲ್ಲಿ....



ಅನಿಲ್ ಹೆಚ್.ಟಿ.
*ಅಧ್ಯಕ್ಷರು, ದಸರಾ ಕವಿಗೋಷ್ಠಿ ಸಮಿತಿ,*
*ಮಡಿಕೇರಿ*



ಎಸ್.ಜಿ. ಉಮೇಶ್
*ಸಂಚಾಲಕರು, ದಸರಾ ಕವಿಗೋಷ್ಠಿ ಸಮಿತಿ,*
*ಮಡಿಕೇರಿ*



ಜಿ.ಕೆ. ರವೀಂದ್ರಕುಮಾರ್
*ಮಡಿಕೇರಿ*



ನಾಗೇಶ್ ಕಾಲೂರು
*ಕಾಲೂರು*



ಶೀತೀರ ರೇಖಾ ವಸಂತ್
*ಗೋಣಿಕೊಪ್ಪ*



ಚೇಂದ್ರಿಮಾಡ ಗ. ಮುತ್ತಣ್ಣ
*ಕುಶಾಲನಗರ*



ಮೂವೇರ ರೇಖಾ ಪ್ರಕಾಶ್
*ಬಲ್ಲಮಾವಟಿ*



ಸುನಿತಾ ಲೋಕೇಶ್ ಸಾಗರ್
*ಕುಶಾಲನಗರ*



ಅನುಶ್ರೀ ಎ.
*ಮಡಿಕೇರಿ*



ಮೋನಿಷ್ ವಿ.ಜೆ.
*ಮಡಿಕೇರಿ*




ಮೂರ್ತಿ ಹೆಚ್.ಬಿ.
*ನಂಜರಾಯಪಟ್ಟಣ*



ಸಹನಾ ಕಾಂತಬೈಲು
*ಬಾಲಂಬಿ*



ಬಿ. ಸಿದ್ದರಾಜು
*ಮದೆನಾಡು*




ಕಿಗ್ಗಾಲು ಎಸ್. ಗಿರೀಶ್
*ಮೂರ್ನಾಡು*



ಸುವಿನ ಪಿ.ಆರ್
*ಕೊಡ್ಲಿಪೇಟೆ*



ಕಡ್ಲೇರ ಆಶಾ ಧರ್ಮಪಾಲ ಪ್ರಭು
*ಮಡಿಕೇರಿ*



ಕುಲ್ಲಚನ ಕಾರ್ಯಪ್ಪ
*ಕುಂಬಳದಾಳು*




ಬಿ.ಆರ್. ಜೋಯಪ್ಪ
*ಮದೆನಾಡು*



ಅನುಪಮ ನೀರಬಿದಿರೆ
*ಮಡಿಕೇರಿ*




ದಿವ್ಯಾ ಎಂ.ಎಂ.
*ಮಡಿಕೇರಿ*




ಕಾಜೂರು ಸತೀಶ್ ಕೆ.ಎನ್.
ಕರಿಕೆ



ಆಶಾ ಶುಭಾಕರ್
ಸೋಮವಾರಪೇಟೆ



ಮಣಜೂರು ಶಿವಕುಮಾರ್
ಸೋಮವಾರಪೇಟೆ




ಅರ್ಜುನ್ ಟಿ.ಎನ್.
ವೀರಾಜಪೇಟೆ



ಸಭಲಂ ಭೋಜನರೆಡ್ಡಿ
ಕುಶಾಲನಗರ



ಎಸಳೂರು ಉದಯಕುಮಾರ್
ಮಡಿಕೇರಿ



ನೀರಬಿದಿರೆ ನಾರಾಯಣ
ಮಡಿಕೇರಿ



ಎಂ. ಉದಯಕುಮಾರ್
ಬಸವತ್ತೂರು



ಎಂ.ಎಸ್. ಮಹೇಂದ್ರ
ಕೊಡ್ಲಿಪೇಟೆ



ಕಾಣತಂಡ ಎಸ್. ಮುತ್ತಪ್ಪ
ಭದ್ರಗೋಳ



ರಂಜಿತಾ ವಿ.ಎನ್
ಕೆದಮುಳ್ಳೂರು

## ಕವಿಗೋಷ್ಠಿ ಸಮಿತಿ

| | | |
|---|---|---|
| ಅಧ್ಯಕ್ಷರು | – | ಶ್ರೀ ಅನಿಲ್ ಹೆಚ್.ಟಿ. |
| ಸಂಚಾಲಕರು | – | ಶ್ರೀ ಎಸ್.ಜಿ. ಉಮೇಶ್ |
| ಪ್ರಧಾನ ಕಾರ್ಯದರ್ಶಿ | – | ಶ್ರೀ ಸದೇಶ್ ಕಾರ್ಮಾಡ್ |
| ಸಮಿತಿ ಸದಸ್ಯರು | – | ಶ್ರೀ ಬಿ.ಸಿ. ದಿನೇಶ್ |
| | – | ಶ್ರೀ ಎ.ಆರ್. ಕುಟ್ಟಪ್ಪ |
| | – | ಶ್ರೀ ಕಾಯಪಂಡ ಶಶಿ ಸೋಮಯ್ಯ |
| | – | ಶ್ರೀ ಕುಡೆಕಲ್ ಸಂತೋಷ್ |
| | – | ಶ್ರೀ ಬಾಚರಣಿಯಂಡ ಅನುಕಾರ್ಯಪ್ಪ |
| | – | ಶ್ರೀ ಜಗದೀಶ್ ಬೆಳ್ಯಪ್ಪ |
| | – | ಶ್ರೀ ಎಚ್.ಎಸ್. ಮಂಜುನಾಥ್ |
| | – | ಶ್ರೀ ಟಿ.ಕೆ. ಸಂತೋಷ್ |

## ಕವನಗಳ ಆಯ್ಕೆಗಾರರು


ಶ್ರೀ ಸುಬ್ರಾಯ ಸಂಪಾಜೆ, ಶ್ರೀ ವಿದ್ಯಾಧರ್ ರೈ, ಶ್ರೀ ಬಿ.ಸಿ. ದಿನೇಶ್, ಶ್ರೀಮತಿ ಕೂಪದಿರ ಶಾರದಾ ನಂಜಪ್ಪ, ಶ್ರೀಮತಿ ಪ್ರಿಯ ರವಿಕುಮಾರ್





...... " ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ..."
ಎಂಬ ಪ್ರಾಕೃತಿಕ ಐಸಿರಿಯ ಕೊಡಗು ಹಲವು ವರ್ಷಗಳಿಂದ ನಾಡಹಬ್ಬವನ್ನು ಆಚರಿಸಿಕೊಂಡು ಬಂದಿದೆ. ಈ ಸಂಭ್ರಮಾಚರಣೆಯನ್ನು ಮತ್ತೆ ಮೆಲುಕು ಹಾಕಲು ಕೊಡಗಿನ ವಿವಿಧ ಭಾಷಿಕರ, ಸೃಜನಶೀಲ ಮನಸ್ಸುಗಳ ಭಾವನೆಗಳನ್ನು ದಾಖಲಿಸುವ ಕೆಲಸವನ್ನು ಈ ಸಂಕಲನದ ಮೂಲಕ ಮಾಡಲಾಗಿದೆ.

ಸುಂದರ ಹೂತೋಟದೊಳಗಿರುವ ಹಲವು ಬಣ್ಣಗಳ ಹೂವುಗಳಂತೆ ಹಲವು ಭಾಷೆಗಳ ಹಂದರದಲ್ಲಿ ಹೆಣೆಯಲಾದ, ಕೊಡಗಿನ ನೆಲ, ಜಲ, ಜನ, ಸಂಸ್ಕೃತಿ ಚರಿತ್ರೆ, ಸುಖ ದುಃಖಗಳ ಕುರಿತಾಗಿ ಮಿಡಿದ ಕವನಗಳು ಇಲ್ಲಿವೆ. ವಿಭಿನ್ನ ಭಾಷೆಗಳಲ್ಲಿ, ಸರಳ ರೂಪಕಗಳಾಗಿ ಇವು ತೆರೆದುಕೊಂಡಿವೆ. ....



# ಕಾವ್ಯ ಸಿಂಚನ

ಮಡಿಕೇರಿ ಜನೋತ್ಸವ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ – ೨೦೦

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ